ಅಪರಂಜಿ

ಫೆಬ್ರವರಿ 2002

ತಿಳಿನಗೆಯ ಕಾರಂಜಿ



ಬಿ. ನಾಗೇಂದ್ರ

ಪ್ರಕಾಶ್

ಬೇಲೂರು ರಾಮಮೂರ್ತಿ

ಭಾರತಿ ಕಾಸರಗೋಡು

ಎಸ್ಸಾರ್ಮ್ಮೂರ್ತಿ

ಅಣ್ಣಾಸ್ವಾಮಿ ಮೊದಲಿಯಾರ್

ಎಂ.ಎನ್.ಕೆ.

ಬೇಲೂರು ರಾಮಮೂರ್ತಿ

ಶ್ರೀಮತಿ ಅರುಣಾ ಆರ್. ಕಾರಂತ

ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500
Ph: 3345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 19 ಫೆಬ್ರವರಿ- 2002 ಸಂಚಿಕೆ -5

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27

ಇಹದಲ್ಲೇನು ಶಿವ! ಪರದಲ್ಲೂ ಬಿಡದು!

- ಬಿ. ಸುರೇಂದ್ರ

ಶಂಕರ ಭಗವತ್ಪಾದರ ಹೆಸರಾಂತ ಭಜಗೋವಿಂದಂ ಸ್ತೋತ್ರಮಾಲಿಕೆಯ ಒಂದು ಶ್ಲೋಕ ಈ ರೀತಿ ಇದೆ:

''ಅಂಗಂ ಗಲಿತಂ ಪಲಿತಂ ಮುಂಡಂ। ದಶನವಿಹೀನಂ ಜಾತಂ ತುಂಡಂ॥

ವೃದ್ಧೋ ಯಾತಿ ಗೃಹೀತ್ವಾ ದಂಡಂ। ತದಪಿ ನ ಮುಂಚತಿ ಆಶಾಪಿಂಡಂ''॥

ಕನ್ನಡಿಸಿದರೆ: ''ಅಲುಗಾಡುವ ಕೈಕಾಲುಗಳು; ನರೆತ ಕೂದಲು; ಹಲ್ಲಿಲ್ಲದ ಬಾಯಿ; ಕುಗ್ಗಿದ ದೇಹ; ನಡೆಯಲು ಕೋಲಿನ ಸಹಾಯ!''

Oh! what a caricature of old age! ಆದರೆ ಆ ವೃದ್ಧನಿಗೆ ವಿಷಯಾಸಕ್ತಿ ಉಡುಗಿಲ್ಲ! ಆ ಜೀವದ ದುರಂತ ಏನೆಂದರೆ ವಯಸ್ಸಾದಂತೆ ಆತನ ಆಶೆಗಳೂ ವೃದ್ಧಿಸಿವೆ. ವಿಷಯಭೋಗ ಎರಡು ಅಲಗುಗಳ ಕತ್ತಿಯಂತೆ - ಅವು ಇಂದ್ರಿಯಗಳ ಹರಿತವನ್ನು ಒಂದುಕಡೆ ಮೊಂಡು ಮಾಡಿದರೆ ಮತ್ತೊಂದೆಡೆ ಮನಸ್ಸಿನಲ್ಲಿ ಚಪಲದ ಬೆಂಕಿಯನ್ನು ಹೊತ್ತಿಸುತ್ತದೆ. ಮನಸ್ಸು ಭೋಗಕ್ಕಾಗಿ ಹಾತೊರೆಯುತ್ತದೆ.

ಆ ಶ್ಲೋಕ ವೃದ್ಧನ ಬಗ್ಗೆ ಅನುಕಂಪ ತೋರಿಸುತ್ತಾ ಹೀಗೆ ಮುಂದುವರೆದಿದೆ: ''ಅಯ್ಯೋ, ಪಾಪ! ಇಷ್ಟಾದರೂ ಆಶೆಯ ಮೂಟೆ ಅವನನ್ನು ಬಿಡಲಿಲ್ಲ!!''

ಈ ನನ್ನ ವ್ಯಾಖ್ಯಾನವನ್ನು ಕೇಳಿ ಸಂತಸಗೊಂಡ ನನ್ನ ಸಹೃದಯ ಸ್ನೇಹಿತರೊಬ್ಬರು ''ವಯಸ್ಸಾದಮೇಲೇನು? ಸತ್ತಮೇಲೂ ಆಶೆ ಬಿಡುವ ಬಾಬತ್ತು ಅಲ್ರೀ!'' ಎಂದು ಉದ್ಗರಿಸಿದರು. ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು ಸ್ವರ್ಗದಲ್ಲಿ ನಡೆದ ಒಂದು ಸಂಭಾಷಣೆಯನ್ನು ನೆರೆದಿದ್ದ ಸತ್ಸಂಗಿಗಳ ಲಾಭಕ್ಕಾಗಿ ಹೇಳಿದರು.

ಅವರದು ಅಪರೂಪದ ಜೋಡಿ. ಗಂಡಹೆಂಡಿರಿಬ್ಬರೂ ಪುಣ್ಯ ಜೀವಿಗಳು. ಪಾಪ! ಇಬ್ಬರೂ ಎಂದೆಂದಿಗೂ ಒಟ್ಟಿಗೆ ಬಾಳಿದವರು. ಅಷ್ಟೇ ಅಲ್ಲ, ಒಟ್ಟಿಗೇ ಸತ್ತರು. ಸತ್ತು ಒಟ್ಟಿಗೇ ಸ್ವರ್ಗವನ್ನು ಸೇರಿದರು!

ಸ್ವರ್ಗದ ಬಾಗಿಲಿನಲ್ಲೇ ದೇವದೂತ ಆ ದಂಪತಿಗಳನ್ನು ಬರಮಾಡಿಕೊಂಡ: ''ಸ್ವರ್ಗಕ್ಕೆ ನಿಮಗೆ ಸ್ವಾಗತ! ಮೊದಲು ನೀವು ಅಲ್ಲಿ ಕಾಣುತ್ತಿರುವ Five-Star Hotel ನಲ್ಲಿ ತಂಗಿ. ನಿತ್ಯಕರ್ಮಗಳನ್ನು ಮುಗಿಸಿ ಅಲ್ಲಿನ Restaurant ನಲ್ಲಿ ನಿಮಗೆ ಬೇಕಾದ ಉಪಹಾರಗಳನ್ನು ಸ್ವೀಕರಿಸಿ. ಅನಂತರ Lunch ಹೊತ್ತಿಗೆ ದೇವರನ್ನು ಸಂದರ್ಶಿಸುವಿರಂತೆ. ನಿಮಗೆ ಈ ರೀತಿ ತಿಳಿಸಲು ಅಪ್ಪಣೆಯಾಗಿದೆ'' ಎಂದ.

ಗಂಡ ವ್ಯಥೆಯಿಂದ ಹೇಳಿದ: ''ಅಯ್ಯೋ! ನನಗೆ diabetes ಇದೆಯಪ್ಪ - ಸಕ್ಕರೆ ಖಾಯಿಲೆ! ಬೇಕಾದ್ದನ್ನು ತಿನ್ನುವ ಭಾಗ್ಯ ನನಗೆಲ್ಲಿದೆ?''

ದೇವದೂತ ಮುಗುಳ್ನಗೆಯಿಂದ ಆಶ್ವಾಸನೆ ಕೊಟ್ಟ: ''ಸ್ವಾಮೀ, ಇದು ಸ್ವರ್ಗ, ಭೂಮಿಯಲ್ಲ! ಇಲ್ಲಿ ಮುಪ್ಪಿಲ್ಲ, ವ್ಯಾಧಿ ಅನ್ನುವುದೂ ಇಲ್ಲ! ಬಯಸಿದ ತಿಂಡಿಗಳನ್ನು ನೀವು ಯಥೇಚ್ಛವಾಗಿ ಭುಜಿಸಿದರೂ ಅದರಿಂದ ಯಾವ ರೀತಿಯ ತೊಂದರೆಯೂ ಇಲ್ಲ!''

ಯಜಮಾನರಿಗೆ ಮಹದಾನಂದವಾಯಿತು. ಆದರೇನು? ಅದೊಂದು ಕ್ಷಣ! ಮರುಕ್ಷಣವೇ ಕಳೆದುಹೋದ ದಿನಗಳು ನೆನಪಾದವು. ಕೂಡಲೆ ಕೋಪ ಬಂತು!

ಕುಪಿತರಾದ ಯಜಮಾನರು ತಮ್ಮ ಒಡತಿಯ ಕಡೆ ತಿರುಗಿದರು - ತಿರುಗಿ ಗುಡುಗಿದರು: ''ಅಯ್ಯೋ, ಪಾಪಿ! ಅದು ತಿನ್ನಬೇಡ, ಇದು ತಿನ್ನಬೇಡ ಅಂತ ಎಷ್ಟೊಂದು ಕಾಡಿದೆಯೇ, ನನ್ನ! ನನ್ನ ದಾರಿಗೆ ಎಷ್ಟು ಅಡ್ಡ ಬಂದೆಯೇ! ಅವೆಲ್ಲವನ್ನೂ ತಿಂದಿದ್ದಿದ್ರೆ ಎಷ್ಟೋ ದಿನಗಳ ಮುಂಚೆಯೇ ಈ ಸ್ವರ್ಗಕ್ಕೆ ಬರಬಹುದಾಗಿತ್ತಲ್ಲೇ!''

ಇಂತು ಸರ್ವಂ ಶಿವಂ



ಪ್ರಕಾಶ್

ವಕೀಲರು - ನ್ಯಾಯ ಮೂರ್ತಿಗಳ ನಡುವೆ ಚರ್ಚೆಗೆ ಕರೆ

- ಸುದ್ದಿ

ಅರೆ!!

★★★

ದೂರದರ್ಶನದಲ್ಲಿ ಹುಡುಗರಿಗೆ ಪಾಠ

- ಪತ್ರಿಕೆ

ಮೇಷ್ಟರು ಹೊಡೆಯುವ ಹಾಗಿಲ್ಲ!!

★★★

ದತ್ತ ಪೀಠದಲ್ಲಿ ಭಕ್ತರು - ಪೋಲೀಸರ ಸಂಖ್ಯೆ ಒಂದೇ ಆಗಿತ್ತಂತೆ!!

★★★

ಗುಂಡಿ ಮುಚ್ಚುವಾಗ ರಸ್ತೆ ಗುಣಮಟ್ಟ ಕಾಪಾಡಲು ನಿಯಮಾವಳಿ

- ಪತ್ರಿಕೆ

ಈಗಂತೂ ಗುಂಡಿಗಳ ಗುಣಮಟ್ಟ ಚೆನ್ನಾಗಿದೆ!!

★★★

ಬಿಳಿ-ಗಿರಿ ರಂಗನ ಬೆಟ್ಟದಲ್ಲಿ ಮಿನಿ ಸಂಪುಟ ಸಭೆ

- ಸುದ್ದಿ

White Paper ಹೊರಬರುತ್ತ ತಾನೆ??

★★★

ಹೆದ್ದಾರಿಯ ಡಾಬಾಗಳಲ್ಲಿ ವಾಹನ ನಿಲುಗಡೆಗೆ ಕಡ್ಡಾಯ ವ್ಯವಸ್ಥೆ

- ಸುದ್ದಿ

ಇದರಿಂದ ಅಪಘಾತಗಳು ಹೆಚ್ಚುಲ್ಲವೆ?!

★★★

ದೇಶದ ಕ್ಷೋಭೆ ಪರಿಹಾರಕ್ಕೆ ಕೃಷ್ಣ ಜಪ

- ಸುದ್ದಿ

ಕೃಷ್ಣ ಪರಮಾತ್ಮನೂ ಬೆಚ್ಚಿದನಂತೆ!!

★★★

ಬಿ.ಡಿ.ಎ. ಮೂಲಭೂತ ಸೌಕರ್ಯಕ್ಕೆ 150 ಕೋಟಿ

- ಪತ್ರಿಕೆ

'ಯಾರ' ಮೂಲಭೂತ.....??


★★★

ಭಾರತದಲ್ಲಿ ಶೇಕಡ 80 ರಷ್ಟು ನ್ಯಾಯಾಧೀಶರು ಪ್ರಾಮಾಣಿಕರು

- ಭಾರತದ ಮುಖ್ಯ ನ್ಯಾಯಾಧೀಶರು

ಟೀಕೆ ಅನಗತ್ಯ!!

★★★



ನಾಡಿನ ಸುದ್ದಿ ಸ್ವಾರಸ್ಯ

– ಬೇಲೂರು ರಾಮಮೂರ್ತಿ

ಮಹತ್ವದ ಸಾರ್ಕ್ ಶೃಂಗಸಭೆ:

ಇತ್ತೀಚೆಗೆ ನೇಪಾಳದಲ್ಲಿ ನಡೆದ ಸಾರ್ಕ್ ದೇಶಗಳ ಶೃಂಗಸಭೆ ತುಂಬಾ ಮಹತ್ವದ್ದಾಗಿತ್ತು. ಎಲ್ಲ ದೇಶಗಳೂ ಒಕ್ಕೊರಲಿನಿಂದ ಭಯೋತ್ಪಾದನೆಯನ್ನು ಖಂಡಿಸಿದವು. ಬಹುಮುಖ್ಯವಾಗಿ ಭಾರತ ಮತ್ತು ಪಾಕೀಸ್ಥಾನದ ನಾಯಕರುಗಳ ಭೇಟಿಯನ್ನು ಇಡೀ ವಿಶ್ವವೇ ನಿರೀಕ್ಷಿಸುತ್ತಿತ್ತು. ಆದರೆ ಕಾಶ್ಮೀರ ಸಮಸ್ಯೆಯನ್ನು ಮುಂದಿಟ್ಟುಕೊಂಡು ತನ್ನ ನೆಲದಿಂದಲೇ ಭಯೋತ್ಪಾದಕರಿಗೆ ಬೆಂಬಲಿಸುತ್ತಿರುವ ಪಾಕೀಸ್ಥಾನದ ನಿಲುವನ್ನು ಶೃಂಗಸಭೆಯಲ್ಲಿ ಚರ್ಚಿಸಲಾಯಿತು. ಪಾಕೀಸ್ಥಾನದ ಅಧ್ಯಕ್ಷ ಪರ್ವೇಜ್ ಮುಷಾರಫ್‌ರವರು ತಮ್ಮ ಭಾಷಣ ಮುಗಿಸಿದ ನಂತರ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರಿಗೆ ಹಸ್ತಲಾಘವ ನೀಡಿದ್ದನ್ನು ''ನಾನು ಹೀಗೇ ನಿಮಗೆ ಕೈ ಕೊಡುತ್ತಿರುತ್ತೇನೆ'' ಎಂದೂ ಅರ್ಥೈಸಬಹುದು. ಆದರೆ ವಿಶ್ವಾದ್ಯಂತ ತಮ್ಮ ರಾಜಕೀಯ ಮುತ್ಸದ್ದಿತನದಿಂದ ಪ್ರಶಂಸೆಗೊಳಪಟ್ಟಿರುವ ವಾಜಪೇಯಿಯವರ ಮುಗುಳ್ನಗೆ ''ನೀವು ಕೈ ಕೊಟ್ಟರೆ ನಾವೂ ಕೈ ಕೊಡುವಷ್ಟು ತಾಖತ್ತುಳ್ಳವರು, ಆದರೆ ಕಾಲು ಕೆರೆದುಕೊಂಡು ಹೋಗುವುದು ಭಾರತೀಯರ ಜಾಯಮಾನವಲ್ಲ'' ಅನ್ನುವುದನ್ನು ಪ್ರತಿಪಾದಿಸುತ್ತಿತ್ತು. ಸುಮ್ಮನೆ ನಿಮ್ಮನ್ನು ನೀವು ಹೊಗಳಿಕೊಳ್ಳಬೇಡಿ, ಭಯೋತ್ಪಾದನೆ ನಿಗ್ರಹಕ್ಕೆ ವಿಶ್ವ ಪ್ರಶಂಶಿಸುವಂತಹ ಕೆಲಸ ಮಾಡಿ ಅನ್ನುವುದು ವಾಜಪೇಯಿಯವರ ಕರೆ.

ಕಾಶ್ಮೀರ ಕಣಿವೆಯಲ್ಲಿ ಶಾಂತಿ ಸ್ಥಾಪನೆ, ಭಾರತ ಪಾಕೀಸ್ಥಾನದ ನಡುವೆ ಮತ್ತೆ ಶಾಂತಿಯುತ ಮಾತುಕತೆ. ಬಸ್ ಸಂಚಾರ ರೈಲು ಸಂಚಾರ ಇವುಗಳನ್ನು ಎರಡೂ ದೇಶದ ನಾಗರೀಕರು ನಿರೀಕ್ಷೆ ಮಾಡುತ್ತಲೇ ಬಂದಿದ್ದಾರೆ. ತಮ್ಮನ್ನು ಚುನಾಯಿಸಿ ಕಳಿಸಿದ ಪ್ರಜೆಗಳ ಆಕಾಂಕ್ಷೆಗಳಿಗನುಗುಣವಾಗಿ ಆಡಳಿತ ನಡೆಸುವುದು ರಾಜಕೀಯ ನಾಯಕರ ಲಕ್ಷಣವಾಗಬೇಕು. ಪಾಕಿಸ್ಥಾನ ಈ ನಿಟ್ಟಿನಲ್ಲಿ ತೆರೆದ ಹೃದಯದಿಂದ ಕಾರ್ಯೋನ್ಮುಖವಾದರೆ ಭಾರತ ಅದಕ್ಕೆ ತಕ್ಕ ಸಹಕಾರ ನೀಡುವುದರಲ್ಲಿ ಸಂಶಯವಿಲ್ಲ. ಎಲ್ಲ ದೇಶಗಳೂ ಪಾಕೀಸ್ಥಾನದ ಕ್ರಿಯೆಯನ್ನು ನಿರೀಕ್ಷಿಸುತ್ತಿವೆ. ಈ ನಿಟ್ಟಿನಲ್ಲಿ ಪಾಕೀಸ್ತಾನ ಎಚ್ಚರಿಕೆಯ ಹೆಜ್ಜೆಯನ್ನಿಟ್ಟು ಇಡೀ ವಿಶ್ವವೇ ಪ್ರಶಂಸಿಸುವಂಥ ಕೆಲಸ ಮಾಡಲು ಇದು ಸಕಾಲ.

ಹುಬ್ಬಳ್ಳಿ ಸುದ್ದಿ

- ಇಸ್ಮಾಯಿಲ್

ಇತ್ತೀಚೆಗೆ ಹುಬ್ಬಳ್ಳಿಯಿಂದ ಸುದ್ದಿಯೊಂದು ಬಂದಿದೆ. ಕೇರಳದ ವ್ಯಕ್ತಿಯೊಬ್ಬ ನೂರು ಘಂಟೆಕಾಲ ನೀರಿನಲ್ಲಿ ತೇಲಿ ವಿಕ್ರಮ ಸಾಧಿಸಿದ್ದಾನೆ. ಆ ವ್ಯಕ್ತಿಗೆ ನಿದ್ದೆ, ಓದು, ಊಟ ಎಲ್ಲಾದಕ್ಕೂ ಏನು ಅಡ್ಡಿಯಿಲ್ಲವಂತೆ. ಹಿಂದಿನ ಜನ್ಮದಲ್ಲಿ ಮೀನಾಗಿರಬಹುದು. ಅವನ ಹೆಸರು ಖಂಡಿತ ಮೀನಾಕ್ಷಿ ಸುಂದರಂ ಅಲ್ಲಿ ನೀರಾ ಕುಡಿದರೆ ಆಕಾಶದಲ್ಲಿ ತೇಲುವ ಅನುಭವ ಅನೇಕರಿಗಿರಬಹುದು, ಆದರೆ ನೀರಿನ ಮೇಲೆ ಮಲಗಿ ತೇಲುವ ಅನುಭವ ಕೇವಲ ಯೋಗಸಾಧನೆಯಿಂದ ಮಾತ್ರ ಸಾಧ್ಯ. ಹಿಂದೆ ಒಬ್ಬ ಹಠಯೋಗಿ ನೀರಿನ ಮೇಲೆ ನಡೆದು ಪಾಪ ಎಡವಿದ್ದರು! ಆದರೆ ಆ ಹಠ ಬಿಟ್ಟು ನೀರಿನ ಮೇಲೆ ಮಲಗಿ ಸಾಧನೆ ಪಡೆಯುವುದು ಸಾಧ್ಯವೆಂಬ ಅರಿವು, ವಿಶ್ವಾಸ ಬಂದಿದೆ. ಈ ಸುದ್ದಿ ಕೇಳಿ ಹಿರಿಯರೊಬ್ಬರು ಹೇಳಿದರು "ಇದೇನು ಅದ್ಭುತಸಾಧನೆ? ನಿಮ್ಮಮ್ಮ 94ನೇ ವಯಸ್ಸಿನಲ್ಲಿ ಸಾಯುವ ನಾಲ್ಕು ಐದು ದಿನಗಳ ಮುಂಚೆ ನೀರಿನ ಹಾಸಿಗೆಯಲ್ಲಿ ಮಲಗಿರಲಿಲ್ಲವೆ?" (Water Bed) ಬಾಯಿಯ ಬದಲು ಮೂಗಿನ ಪರ್ಯಾಯ ವ್ಯವಸ್ಥೆಯಿಂದ ನೀರು ದೇಹದ ಒಳಗೆ ಹೊರಗೆ ಓಡಾಡುವ ಸುವ್ಯವಸ್ಥೆಯಿದ್ದರೆ ಸಾಕಂತೆ ಈ ಸಾಧನೆಗೆ. ಕ್ರಿಕೆಟ್‌ನಂತೆ ನೀವು ಕೂಡ Eat water-Drink water-Sleep water ಎಂಬ ಸ್ಲೋಗನ್ ಕೂಗಬಹುದು. ನೀರಿನ ಮೇಲೆ ನಿದ್ದೆ ಮಾಡುವುದರಿಂದ ಎದ್ದ ತಕ್ಷಣ ಹಲ್ಲುಜ್ಜಲು, ಮುಖ ತೊಳೆಯಲು ಹೆಚ್ಚು ಶ್ರಮಪಡಬೇಕಾಗಿಲ್ಲ. ಬೋರಲಾದರೆ ಸಾಕು. ಆದರೆ ಸೋಮಾರಿ ಸಂಘದವರು "ಬೋರಲಾಗಬೇಕಾ?" ಎಂದು ಮೂಗು ಮುರಿಯುತ್ತಾರೆ. ಸ್ವಿಮಿಂಗ್ ಪೂಲ್‌ಗಳ ರೀತಿಯಲ್ಲಿ ತೇಲುವ ತೊಟ್ಟಿಗಳ ಕ್ಲಬ್‌ಗಳು ನಗರಗಳಲ್ಲಿ ತಲೆ ಎತ್ತುವ ದಿನಗಳು ದೂರವಿಲ್ಲ.

ಶಬ್ದಪಾರಮಾರ್ಗಂ ಅಶಕ್ಯಂ!

– ಭಾರತೀ ಕಾಸರಗೋಡು

ನಿಜ ನಿಜ ಶಬ್ದಪಾರಂ ಆರ್ಗಂ ಅಶಕ್ಯಂ! 'ಸರಸತಿಗೆರಡನೆಯ ಬೀಣೆ' ಕೇಶಿರಾಜನೇ ಹೀಗೆಂದು ಅಪ್ಪಣೆ ಕೊಡಿಸಿಬಿಟ್ಟಿದ್ದಾನೆಂದ ಮೇಲೆ ಆ ಮಾತುಗಳ ಸತ್ಯಾಸತ್ಯತೆಯನ್ನು ಪ್ರಶ್ನಿಸುವುದು ಅಸಂಭವವು. ಇನ್ನು ಈ ಶಬ್ದ ಸೀಮೆಯ ಅಗಾಧತೆಯಾದರೂ ಎಂಥದ್ದು? ಶಬ್ದದೊಳಗಣ ನಿಶ್ಶಬ್ದದಿಂದ ಹಿಡಿದು ನೀರವತೆಯೊಳಗಣ ನಿಶ್ಚಲ ನಿನಾದದ ವರೆಗೆ ಅದರ ಹರಹು! ಆದರೆ ಆ ಸೂಕ್ಷ್ಮತ್ವ, ಆ ಸೌಂದರ್ಯ ಇವುಗಳನ್ನೆಲ್ಲ ನಾನೀಗ ವಿವರಿಸ ಹೊರಟರೆ ಮತ್ತೊಂದು ನವನವೀನ ಶಬ್ದ ಕಾವ್ಯಪರಂಪರೆ ಸೃಷ್ಟಿಯಾಗಿಬಿಡಬಹುದಾದ ಸಾಧ್ಯತೆಯೂ ಮತ್ತು ಅದು ಸತ್ಕಾವ್ಯದ ಸಲ್ಲಕ್ಷಣದಂತೆ ''ಸಿರಿಗೀಕ್ಷಿಪ ರಸಚಿತ್ರ'' ವಾಗದೆಯೇ ಹೋಗಿಬಿಡಬಹುದಾದ ಪ್ರಮಾದವೂ ಇದ್ದೇ ಇವೆ. ಸಹೃದಯರೇ, ನನ್ನನ್ನು ನಂಬಿ. ಕೊರೆತದ ಬಹು ಬಗೆಯ ಪರಿಪಾಟಲುಗಳಿಗೆ ನಿಮ್ಮನ್ನು ಗುರಿ ಮಾಡುವುದಿಲ್ಲ. ಕೇವಲ ಹನಿಮಾತುಗಳ ಸಣ್ಣದೊಂದು ಮಣಿ ಮಾಲೆಯನ್ನು ವಿನಯಪೂರ್ವಕವಾಗಿ ತಮ್ಮ ಮುಂದಿಡುತ್ತೇನೆ. ''ದೋಷವಿದರೊಳ್ ಏನಾನುಮುಳ್ಳೊಡಂ... ಪ್ರಿಯದಿಂತಿರ್ದುವುದು.''

ಏನಾದರಾಗಲಿ. ಮಾತೆಂಬುದಂತು ಶಬ್ದದ್ದೇ ಒಂದು ಪ್ರಬುದ್ಧ (ಪ್ರಚಂಡ?) ಪ್ರಕಾರ. ಮತ್ತೆ ಈ ಮಾತು ಮಾಯೆಯಲ್ಲಿ ಅದೆಷ್ಟು ಬಗೆಯಲ್ಲ! ಮಧುರ ಮಾತು ಅಮರ ಮಾತು ದಿಟದ ಮಾತು ಸಟೆಯ ಮಾತು ಬುದ್ಧಿಮಾತು ಸುದ್ದಿಮಾತು ಲಲಿತ ಮಾತು ಕಲಿತ ಮಾತು ಹಿಗ್ಗುಮಾತು ಸಿಗ್ಗುಮಾತು ಮುಗ್ಧಮಾತು ಶುದ್ಧಮಾತು ದೊಡ್ಡ ಮಾತು ದಡ್ಡಮಾತು ಜೇನ ಮಾತು ಜೊನ್ನಮಾತು ಮಾತ ಮಾತು ಮಾತೆ ಮಾತು... ದೇವ ದೇವಾ... ವರ್ಣಿಸಲಾಗದು ವರ್ಣಿಸಲಾಗದು ಈ ಮಾತು ಮಡುವ!

ನನಗೇನಿಲ್ಲ. ಹೇಗೂ ಶಬ್ದಪಾರ ಮಾರ್ಗವು ಅಶಕ್ಯವು ಎಂದೇ ನನ್ನ ಮಾತನ್ನು ಪ್ರಾರಂಭಿಸಿಬಿಟ್ಟಿರುವುದರಿಂದ ಬೇಕಾದರೆ ಈ ವಚನ ವಿಚಾರವನ್ನು ಇಲ್ಲಿಗೇ ಸರಿಸಮಾಪ್ತಿಗೊಳಿಸಿ ಪೆಂಗ್ವಿನ್‌ಪುಟ್ಟನ ಥರ ಆನಂದವಾಗಿ ನಡೆಯುತ್ತ ನಿಶ್ಶಬ್ದ (ಹಿಮ) ತೀರವೊಂದನ್ನು ಸೇರಿಬಿಡುಬಹುದು. ಆದರೂ ನಾನು ಹಾಗೆ ಮಾಡುವುದಿಲ್ಲ. ಬರಹ ಅಂದಮೇಲೆ ಪುಟಮಿತಿ ಅದಕ್ಕಿದೆ. ಅದಕ್ಕೆ ಒಳಪಡುವಷ್ಟು ಪ್ರಾಮಾಣಿಕತೆಯಂತು ನನಗಿದ್ದೇ ಇದೆ. ಆದ್ದರಿಂದ ಬೇರೆ ಬೇರೆ

ಕಾರಣಗಳಿಗಾಗಿ ಆಗಾಗ ನನಗೆ ನೆನಪಾಗುವ ಕೆಲವು ಮಾನವ ಮಾತುಗಳನ್ನು ಮಿತಿಯಲ್ಲೇ ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಆಗಬಹುದಷ್ಟೇ?

ಮೊದಲು ಒಂದು ಅಮ್ಮನ ಮಾತನ್ನಿಮಗೆ ಹೇಳುತ್ತೇನೆ. ಈ 'ಅಮ್ಮ' ಹಿರಿಮೆ ನಿಮಗೆ ತಿಳಿಯದ್ದಲ್ಲ. ಹೆಸರಿನಲ್ಲೇ ಮಾರ್ದವತೆಯನ್ನು ಸುಡಿದುಬಿಡುವ ಪದ ಅಮ! ಈ ಅಮ್ಮನಿಗೆ ತನ್ನ ತಾಯ್ತನದ ಬಗ್ಗೆ ಅಸೀಮ ಜವಾಬ್ದಾರಿಗಳಿರುವಂತೆಯೇ ಅಪಾರ ಹೆಗ್ಗಳಿಕೆಯೂ ಇದ್ದಂತಿದೆ. ಎಂತೆಂತಹ ಸೊಗಸಾದ ಮಾತುಗಳನ್ನೀಕೆ ಆಡಬಲ್ಲಳು! ಈ ಮಾತು ಕೇಳಿ. ಗೆಳತಿಯ ತಾಯಿ ಮರಣಶಯ್ಯೆಯಲ್ಲಿದ್ದರು ಎಲ್ಲ ಕಡೆಗಾಲದ ವಿಫಲ ಹೋರಾಟ. ಪ್ರತಿದಿನವೂ ಒಂದೊಂದು ಬಾಟಲಿ ರಕ್ತವನ್ನು ಆಕೆಗೆ ನೀಡಬೇಕಾಗಿತ್ತು. ಅದನ್ನೆಲ್ಲ ಮಕ್ಕಳೇ ಪೂರೈಸುತ್ತಿದ್ದರು. ಹೇಗೂ ವಿಪುಲವಾಗಿದ್ದರಲ್ಲ! ಅದೊಂದು ದಿನ ಗೆಳತಿಯ ಅಣ್ಣ ತಾಯಿಗೆ ರಕ್ತ ಕೊಟ್ಟಿದ್ದರು. ಸಂಜೆ ಅಕ್ಕ-ತಂಗಿಯರೊಡನೆ ಕೂತು ಅಮ್ಮನ ಆರೈಕೆ ವಿಚಾರಿಸುವಾಗ ಬಲು ಹೆಮ್ಮೆಯಿಂದ ಅವರಂದರು - ''ನೋಡು ಲೀಲು, ಅಮ್ಮ ಈಗ ಎಷ್ಟು ಗೆಲುವಾಗಿ ಕಾಣಿಸ್ತಾಳೆ? ಇವತ್ತು ಅವಳಿಗೆ ರಕ್ತ ಕೊಟ್ಟದ್ದು ನಾನಲ್ಲವಾ?'' ಅಮ್ಮನ ದುರ್ಬಲ ಕಣ್ಣುಗಳಲ್ಲೂ ಒಂದು ಸಣ್ಣ ತುಂಟ ನಗು ಮಿನುಗಿತು. ಮಗನನ್ನೇ ಮಮತೆಯಿಂದ ದಿಟ್ಟಿಸುತ್ತ ಆಕೆ ಅಂದರು- ''ಹೌದಾ ಮಗಾ? ನಿನ್ನ ಮೈಯಲ್ಲಿ ರಕ್ತ ತುಂಬಿಸಿದೋರು ಯಾರೋ?''

ಮಾತಿನ ವಿಷಯದಲ್ಲಿ ನನ್ನ ಅಮ್ಮನೂ ಹಾಗೇ! ಸಂದರ್ಭಕ್ಕೆ ತಕ್ಕ ಹಾಗೆ ವಿವಿಧ ಚಿನಕುರುಳಿ ಮಾತುಗಳು ಆಕೆಯ ಬತ್ತಳಿಕೆಯಲ್ಲಿ ಸದಾ ಸಿದ್ಧವಾಗಿರುತ್ತಿದ್ದವು. ಈ ಉದಾಹರಣೆ ಕೇಳಿ. ಅವತ್ತು ನನ್ನ ತಂದೆ ಅರ್ಜೆಂಟಾಗಿ ಸ್ನಾನಕ್ಕೆ ಹೊರಟಿದ್ದರು. ಪ್ರತಿದಿನ ಸ್ನಾನಕ್ಕೆ ಹೊರಟಾಗ ಮಂದ ಕೋಲಿನ ಮೇಲೆ ನೀಟಾಗಿ ಮಡಿಸಿ ಹಾಕಿರುತ್ತಿದ್ದ ಅಚ್ಚ ಬಿಳಿಯ ಚಡ್ಡಿ ಬನೀನುಗಳನ್ನು ಜತೆಗೇ ಬಚ್ಚಲುಮನೆಗೆ ತೆಗೆದುಕೊಂಡು ಹೋಗುವ ಪರಿಪಾಠ. ಹೀಗೆ ಅವರ ಬಟ್ಟೆಗಳನ್ನು ಕೈಗೆ ಸಿಗುವಂತೆ ಓರಣವಾಗಿ ಇಡುವುದು ಅಮ್ಮನ ಕರ್ತವ್ಯ. (ಪ್ರತಿಯೊಂದು ಕೆಲಸಕ್ಕೂ ಅಮ್ಮನನ್ನೇ ಹೊಣೆ ಮಾಡುತ್ತಿದ್ದ ದುಷ್ಟ ಮಕ್ಕಳು ನಾವಲ್ಲವೇ?) ಹಾಗೆ ಕೆಲವು ಸಾರಿ ನಮ್ಮ ಅಣ್ಣಯ್ಯನೂ ಈ ಕೆಲಸ ಮಾಡುತ್ತಿದ್ದುದುಂಟು. ಎಷ್ಟು ಹೊತ್ತಾದರೂ ಯಾರೂ ತೆಗೆಯದೆ ಹಿತ್ತಲಲ್ಲೇ ಒಣ ಒಣಗಿ ಎಣ್ಣೆ ಬಿಡುತ್ತಿದ್ದ (ಈ ಮಾತಿನ ಅಲಂಕಾರ ಕೂಡ ಅವರದೇ) ಬಟ್ಟೆಗಳನ್ನೆಲ್ಲ ತಾವೇ ಅಲ್ಲೇ ಅಚ್ಚುಕಟ್ಟಾಗಿ ಮಡಿಸಿ ಆ ಉದ್ದ ರಾಶಿಗೆ ಮೇಲೊಂದು ಕೈ ಕೆಳಗೊಂದು ಕೈ ಕೊಟ್ಟು ಎದೆಗವಚಿ ಉಸ್ಸೆಂದು ಒಳಗೆ ತರುತ್ತಾ, ರೇಡಿಯೋ ಕೇಳುತ್ತಲೋ ಪೇಪರು ಓದುತ್ತಲೋ ಅಲ್ಲಲ್ಲೇ ಚೆದುರಿರುವ ಮಕ್ಕಳತ್ತ ತುಂಟ ನೋಟ ಬೀರಿ ''ನೋಡು ನೋಡು ವಿಷಯ ಹ್ಯಾಗಿದೆ ನಮ್ಮನೇಲಿ! ಇವರುಗಳು (ವಿಶೇಷವಾಗಿ ಹೆಣ್ಣು ಮಕ್ಕಳನ್ನು ಉದ್ದೇಶಿಸಿ)

ಮೈಮೇಲೆ ಹಾಕ್ಕೊಳ್ಳೋ ಬಟ್ಟೆಗಳನ್ನು ನಾನು, (ಹೆಚ್ಚಿನ ಆತ್ಮ ಪ್ರತ್ಯಯದಿಂದ) ನಾನು, ಒಳಗೆ ತಂದಿಡಬೇಕು'' ಅಂತ ಅಕಳಂಕವಾಗಿ ನಕ್ಕುಬಿಡುತ್ತಿದ್ದರು.

ಅವತ್ತು ಯಾಕೋ ಏನೋ ಅಣ್ಣಯ್ಯನ ಚಡ್ಡಿ - ಬನೀನು ಮಂಚದ ಕೋಲಿನ ಮೇಲೆ ಇರಲಿಲ್ಲ. ಕುರ್ಚಿ ಬೆನ್ನಿನ ಮೇಲೇನಾದರೂ ಹಾಕಿಕೊಂಡಿದ್ದೆನೇನೋ ಅಂತ ಅಲ್ಲಿ ತಡಕಿದರು. ಅಲ್ಲಿ ಇರಲಿಲ್ಲ. ಇಸ್ತ್ರಿಗೆ ಅಂತೇನಾದರೂ ದಿಂಬಿನ ಕೆಳಗೆ ಇಟ್ಟುಬಿಟ್ಟೆನೋ ಅಂತ ದಿಂಬೆತ್ತಿ ಹುಡುಕಿದರು. ಇಲ್ಲ ಅಲ್ಲೂ ಇರಲಿಲ್ಲ ಅದು! ಅಲ್ಲಿಗೆ ಸಹನೆಯೆಂಬುದು ಮುಗಿದು ಮುನಿಸಿನ ಪರಾಕಾಷ್ಠೆ ಜರ್ರನೆ ತಾರಪಂಚಮಕ್ಕೇರಿತು. ಉಜ್ವಲ ಧ್ವನಿಯಲ್ಲಿ ''ಈ ಕೊಂಪೇಲಿ ಶಿಸ್ತೆಂಬುದು ಚೂರು ಇಲ್ಲ.... ಎಲ್ಲ ಶ್ವಪಚರು... ಶುದ್ಧ ಅನಾಗರಿಕರು. ಇಟ್ಟ ವಸ್ತು ಇಟ್ಟಕಡೆ ಇರಲ್ಲ!... ಬೇಕಾದಾಗ ಸಿಗಲ್ಲ!... ಎಲ್ಲ ನನ್ನ ಕರ್ಮ!... ತಲೆ ಚಚ್ಕೋಬೇಕು ನನ್ನ ಹಣೆ ಬರಹಕ್ಕೆ!'' ಅಂತೆಲ್ಲ ನಿಜವಾಗಿಯೂ ಹಣೆ ಚಚ್ಚಿಕೊಳ್ಳುತ್ತ ಅಡಿಗೆಮನೆ ಬಾಗಿಲಿಗೆ ಬಂದು ''ಏನೇ ಯಜಮಾನಿ, ನಾನು ಅಷ್ಟೆಲ್ಲ ಕೂಗಾಡ್ತಾ ಇದ್ದರೂ ಏನೂ ಆಗದೋಳ ಹಾಗೆ ನಿನ್ನ ಪಾಡಿಗೆ ನೀನು ಕೆಲ್ಸ ಮಾಡ್ತಾನೇ ಇದೀಯಲ್ಲ? ಎಲ್ಲಿ ಹಾಳಾಗಿ ಹೋಯ್ತೋ ನನ್ನ ಬಟ್ಟೆಗಳೂ?'' ಆರ್ಭಟಿಸಿದರು. ಮಂದಾಸನದ ಮುಂದೆ ಬಾಗಿ ಕೂತು ಬೆಣ್ಣೆ ಕಡೆಯುತ್ತಿದ್ದ ಅಮ್ಮ ಅದನ್ನ ಅಷ್ಟಕ್ಕೇ ನಿಲ್ಲಿಸಿ ಮೆಲ್ಲಗೆ ಎದ್ದು ಬಂದು ಗಂಡನಿಗೆ ಮುಖಾಮುಖಿಯಾಗಿ ಬಹಳ ಪ್ರಶಾಂತವಾಗಿ ಆದರೆ ತಪ್ಪೊಪ್ಪಿಗೆಯ ಧ್ವನಿಯಲ್ಲಿ ''ಕ್ಷಮಿಸಿಬಿಡೀಂದ್ರೆ. ಇವತ್ತೊಂದಿನ, ಯಾಕೋ ತುಂಬ ಆಸೆ ಆಯ್ತೂಂತ ನಿಮ್ಮ ಚಡ್ಡಿ - ಬನೀನು ನಾನು ಹಾಕ್ಕೊಂಡು ಬಿಟ್ಟೆ!'' ಅಂದಳು. ಅಲ್ಲೇ ಕುಸಿದು ಕುಳಿತ ಅಣ್ಣಯ್ಯ ಒಂದು ನಕ್ಕರೆಂದರೆ! ಅವರಿಗೆ ಜೋಕ್ ಹೇಳಲು ಸುತಾರಾಂ ಬರುತ್ತಿದ್ದಿಲ್ಲ. ಆಸ್ವಾದಿಸುವುದನ್ನು ಮಾತ್ರ ವಿಪರೀತ ಹೃತ್ಪೂರ್ವಕವಾಗಿ ಮಾಡುತ್ತಿದ್ದರು... ಕೆನ್ನೆಯೆಲ್ಲ ಟೊಮ್ಯಾಟೋ ಆಗಿಬಿಡುವಷ್ಟು!

ಮೇಲಿನ ಪ್ರಕರಣಗಳು ಮಾತಿನ ಬಣ್ಣಕ್ಕೆ ಭಾವಕ್ಕೆ ಉದಾಹರಣೆ. ಆದರೆ ನಮ್ಮ ಸುತ್ತ ಸುಳಿವ ಎಲ್ಲ ಮಾತುಗಳೂ ಮನಸಿಗೆ ಮಿಂಚಾಗಬಲ್ಲವೇ? ಹಾಗೆ ಭಾವಿಸುವುದು ತಪ್ಪಾದೀತು. ನಮ್ಮಲ್ಲಿ ಅನೇಕರು ಕಠಿಣೋಕ್ತಿ ಚತುರರು. ಅದವರಿಗೆ ಸುಲಭ ಸಿದ್ಧಿಯೂ ಹೌದು. ಈ ಕತೆ ಕೇಳಿ. ಆಗತಾನೇ ನನ್ನ ವ್ಯಾಸಂಗ ಮುಗಿದಿತ್ತು. ತತ್ವಶಾಸ್ತ್ರದ ಅಧ್ಯಾಪಕ ಹುದ್ದೆಗೆ ಅಲ್ಲಿ ಇಲ್ಲಿ ಅರ್ಜಿ ಗುಜರಾಯಿಸಿದೆ. ಲಂಚ ಕೊಡದೆ ಕೆಲಸ ಸಿಗುವುದಿಲ್ಲ ಎಂದು ಅನೇಕರು ಹೆದರಿಸಿದರೂ ''ಏನು, ಪ್ರಪಂಚದಲ್ಲಿ ನ್ಯಾಯ ಸತ್ತು ಹೋಗಿದೆಯೆ'' ಅಂತ ದಬಾಯಿಸಿ ನನ್ನ ಪ್ರಯತ್ನ ನಾನು ಮುಂದುವರಿಸಿದೆ. ಸಂಸ್ಥೆಯೊಂದರಿಂದ ಸಂದರ್ಶನಕ್ಕೆ ಕರೆಯೂ ಬಂದಿತು. ಹೋದೆ. ಸಮಿತಿಯಲ್ಲಿ ಮೂವರು ವ್ಯಕ್ತಿಗಳಿದ್ದರು. ಇಬ್ಬರು ಪ್ರಶ್ನೆ

ಕೇಳುವ ಪ್ರಾಧ್ಯಾಪಕರು. ಅವರು ಪಾಪ, ಪ್ರೊಫೆಸರರು ಹೇಗಿರಬೇಕೋ ಹಾಗೇ ಇದ್ದರು. ಸಭ್ಯರಾಗಿ ಮತ್ತು ದಿವಿನಾಗಿ ದಿರಿಸು ಧರಿಸಿ! ಉಳಿದವನೇ ಕುರ್ಚಿ ಮನುಷ್ಯ. ಆದ್ದರಿಂದ ಮಧ್ಯದ ಕುರ್ಚಿಯಲ್ಲಿ ಆಸೀನನಾಗಿದ್ದ ಈ ಮಹಾ ಕಾಯನ ಶರೀರವ ತುಂಬೆಲ್ಲ ಬೃಹಸ್ಪತಿ ಚಹರೆ! ಶಿರೋಭಾರ ಬೇರೆ ಎಷ್ಟಿತ್ತೆಂದರೆ ಜಂಭವೆಂಬುದು ಮುಖದ ಬಿಡಿ ಭಾಗಗಳಲ್ಲೂ ತುಂಬಿ ತುಂಬಿ ತುಳುಕುತ್ತಿತ್ತು. ಈ ಅತಿ ಜಂಬದ ಕಾರಣ ಆತನೋರ್ವ ವಿಕಲಾಂಗನಂತೆ ನನಗೆ ತೋರಿಬಂದ. ವಿನಾಕಾರಣ ಊದಿಕೊಂಡ ಎರಡು ಅನಾಗರಿಕ ಕೆನ್ನೆಗಳು, ಪ್ರಪಾತದಲ್ಲೆಲ್ಲೋ ಇದ್ದಂತಿದ್ದ ನರಿಕಣ್ಣು, ಅನವಶ್ಯವಾಗಿ ರೋಮಭರಿತನಾದ ಕರಿಕಿವಿ. ಹೇಳುತ್ತೇನಲ್ಲ, ಆತ ನನ್ನನ್ನು ನೋಡುತ್ತಿದ್ದ ಕುಹಕ ನೋಟವಂತೂ ನನಗೆ ಸ್ವಲ್ಪವೂ ಹಿಡಿಸಲಿಲ್ಲ. ಆದರೂ ಅಭ್ಯರ್ಥಿಯಾದ್ದರಿಂದ ಅಸಡ್ಡೆಯಿಲ್ಲದೆ ಕೂತು ಗೊತ್ತಿರುವ ಪ್ರಶ್ನೆಗಳಿಗೆಲ್ಲ ಹುರುಪಿನಿಂದ ಉತ್ತರಿಸುತ್ತ ಗೊತ್ತಿಲ್ಲದ್ದಕ್ಕೆ ಮುಲಾಜಿಲ್ಲದೆ ತಾರಮ್ಮಯ್ಯ ಆಡಿಸುತ್ತಾ ಕೂತಿದ್ದೆ. ಅಂತೂ ಈ ಪ್ರಹಸನ ಮುಗಿಯಿತು. ಹೊರಡಲು ಮೇಲೆದ್ದೆ. ಇಷ್ಟು ಹೊತ್ತೂ ಸುಮ್ಮಗಿದ್ದ ಮಹಾಕಾಯ ''ರೀ, ಸ್ವಲ್ಪ ತಾಳ್ರೀ'' ಗುಡುಗಿತು. ನನಗೋ, ಈ 'ರೀ' ಪ್ರಯೋಗದಲ್ಲೇ ಸಮಾಧಾನವಿಲ್ಲ. ಅದೇನಿದ್ದರೂ ಮೊದಲ ದರ್ಜೆ ಮೇಲಧಿಕಾರಿ ಮೂರನೇ ದರ್ಜೆ ಗುಮಾಸ್ತರನ್ನು ಕರೆಯುವ ಕಟುಧಾಟಿ ಅಂತ ನನ್ನ ಸ್ವಂತ ಅಭಿಪ್ರಾಯ. ನಾವು ಪರಸ್ಪರ ಕರೆದುಕೊಳ್ಳಲು ಎಷ್ಟೆಲ್ಲ ಸುಂದರ ಪದಗಳಿವೆ! ದೊಡ್ಡವರಾದರೆ ತಾತಾ, ಆರ್ಯ, ಮಹಾತ್ಮ... ಚಿಕ್ಕವರಾದರೆ ಮಗೂ, ವತ್ಸಾ, ಚಿರಂಜೀವಿ... ಇತ್ಯಾದಿ ಇತ್ಯಾದಿ. ಅಯ್ಯೋ ಸಧ್ಯ! ನನ್ನ ಮಾತು ಯಾರು ಕೇಳುತ್ತಾರೆ? ಹೋಗಲಿ ಬಿಡಿ. ಮತ್ತೆ ಮಹಾಕಾಯನ ವಿಷಯಕ್ಕೆ ಬರೋಣ. ಆತನ ಮಾತಿನ ರೀತಿ ಅಸಹನೀಯವಾಗಿದ್ದರೂ ಅವ ಕುರ್ಚಿ ವ್ಯಕ್ತಿಯಾದ್ದರಿಂದ ಸ್ವಲ್ಪ ತಾಳಿದೆ. ಆತ ಬಲು ಕುಚೋದ್ಯದಿಂದ ನನ್ನನ್ನೇ ನೋಡುತ್ತಾ ಈ ರೀತಿಯಾಗಿ ಹೇಳಿದ ''ನೋಡ್ರೀ, ನಿಮ್ಗೆ ಎರಡು ವಿಷಯ ಹೇಳ್ಬೇಕು. ಮೊದಲನೆಯದಾಗಿ, ನಾವು ನಿಮ್ಗೆ ಈ ಕೆಲ್ಸ ಕೊಡಲ್ಲ ಎರಡನೆಯದಾಗಿ: ಈ ನಿರಾಶೇನ ನೀವು, ನಿಮ್ಮಲ್ಲಿ ಕರ್ಮ ಸಿದ್ಧಾಂತ ಅಂತ ಏನೋ ಥಿಯರಿ ಇದ್ಯಲ್ಲ, ಅದನ್ನ ಉಪಯೋಗಿಸಿ ಹ್ಯಾಗೆ ಸಂತೈಸಿಕೋತೀರಿ?''

ನನ್ನ ಅಪ್ಪನ ವಯಸ್ಸಿನವ ಈ ಕುರ್ಚಿ ಮನುಷ್ಯ ''ಸರ್ವರಲ್ಲಿಯೂ ಸ್ನೇಹ ಭಾವವುಳ್ಳ ಶ್ರೀ ರಾಮನು ತನಗಿಂತ ಹಿರಿಯರಾದವರನ್ನು ಗೌರವದಿಂದಲೂ ಕಿರಿಯರನ್ನು ಪ್ರೇಮದಿಂದಲೂ ಪರಿಭಾವಿಸುತ್ತಿದ್ದ'' ಅನ್ನುವ ಆಪ್ತ ವಾಲ್ಮೀಕಿ ವಾಕ್ಯವನ್ನು ಬಹುಶಃ ಈತ ಓದಿರಲಾರ. ನನಗೆ ಆತನಲ್ಲಿ ಜುಗುಪ್ಸೆಯಾದರೂ ಸಂದರ್ಶನದಲ್ಲಿ ಸವಾಲಿಗೆ ಉತ್ತರಿಸಬೇಕಾದ್ದು ಮರ್ಯಾದೆ ಪ್ರಶ್ನೆಯಷ್ಟೆ!

ಆದ್ದರಿಂದ ಅವನ ವರಸೆಯನ್ನು ಅವನಿಗೂ ವಾಪಸು ಹಾಕಿದೆ. ''ನಾನು ಕೂಡ ನಿಮಗೆ ಎರಡು ವಿಷಯ ಹೇಳಬೇಕಿದೆ. ಮೊದಲನೇದು: ಈ ಸಂದರ್ಶನ ಒಂದು ನಾಟಕ, ಇಲ್ಲಿ ನನಗೆ ಕೆಲಸ ಸಿಗಲ್ಲ ಅನ್ನೋದು ಮೊದಲೇ ಗೊತ್ತು. ಆದ್ದರಿಂದ ಮನಸ್ಸನ್ನು ಸಂತೈಸಿಕೊಳ್ಳೋ ಪ್ರಶ್ನೇನೇ ಇಲ್ಲ. ಎರಡನೇದು: ಕರ್ಮಸಿದ್ಧಾಂತ ಆಗಲಿ, ಕರ್ಮಯೋಗ ಆಗಲಿ ಭಾರತೀಯ ತತ್ವಶಾಸ್ತ್ರದ ಉತ್ತುಂಗ ಕಲ್ಪನೆಗಳು ಸಾಧಾರಣರಿಗೆ ನಿಲುಕುವುದಲ್ಲ. ಆದ್ದರಿಂದ ಇಲ್ಲಿ ಅವುಗಳ ವ್ಯಾಖ್ಯಾನ ಅನುಚಿತವಾಗುತ್ತದೆ'' ಆತ ಪೆಚ್ಚಾದ. ಕಪ್ಪಿಟ್ಟ ಅವನ ಮುಖವನ್ನು ನೋಡುತ್ತಾ ನಿಲ್ಲುವುದು ಸಂತೋಷದ ಮಾತೇನಲ್ಲ. ನನ್ನದು ಆಸ್ಥಾನ ಕಾರುಣ್ಯ ಆದರೂ ಪರವಾಗಿಲ್ಲ ಅಂತ ಅಲ್ಲಿಂದ ಹೊರಟು ಬಿಟ್ಟೆ.


ನಮ್ಮಲ್ಲಿ ಇನ್ನು ಕೆಲವರಿದ್ದಾರೆ. ಉಸಿರಿಗೂ ವ್ಯವಧಾನವಿಲ್ಲದ ಹಾಗೆ ಪಟಪಟನೆ ಮಾತನಾಡುತ್ತಲೇ ಇರುತ್ತಾರೆ. ಅವರ ಅಮೋಘ ಅಶ್ವಶಕ್ತಿಗೆ ನಾವು ನಿಬ್ಬೆರಗಾಗುವಷ್ಟು! ಅವರ ಈ ಧಾರಾವಾಹಿಯಲ್ಲಿ ಸ್ವಾನುಕಂಪಕ್ಕೇ ಪ್ರಥಮ ಆದ್ಯತೆ ಬೇರೆ! ''ಬೆಳಗಿನ ನನ್ನ ಕಾಫೀನ ನಾನೇ ಕುಡಿದೆ'' ಅನ್ನುವುದರಿಂದ ಹಿಡಿದು ರಾತ್ರಿಯ ''ಸ್ವಂತ ನಿದ್ದೆಯಲ್ಲಿನ ಗೊರಕೆಗಳನ್ನು ಖುದ್ದಾಗಿ ನಿರ್ವಹಿಸಿದೆ'' ಅನ್ನುವವರೆಗೆ ಇವರ ಸ್ವಸಹಾಯನುಭೂತಿಯ ಭಾಷಣಗಳು ಅವಿರತವಾಗಿ ಸಾಗುತ್ತಿರುತ್ತವೆ. ಈ ಸೆಲ್ಫ್ ಪಿಟಿಯ ಗೀಳು ಮೊದಲು ನನಗೂ ತುಂಬಾ ಇತ್ತು ''ನಿನ್ನನೆ ನೀಂ ಬಗೆಯ ಬಗೆಯದಿರ್ ಪೆರಪೆರತಂ'' ಅನ್ನುವ ಪಂಪನ ಪೆಂಪಿನ ಮಾತುಗಳನ್ನು ವಿಪರೀತ ಬಗೆದುದರ ಪರಿಣಾಮವೂ ಇದಾಗಿರಬಹುದು. ಅಂತೂ ನನ್ನ ದಿನಚರಿಯ ಸಂಕಷ್ಟ, ಸಂಕೀರ್ಣತೆಗಳನ್ನು ಅನ್ಯರಲ್ಲಿ ಕರುಣಾ ಜನಕವಾಗಿ ತೋಡಿಕೊಳ್ಳುತ್ತಿದ್ದೆ. ಇದಕ್ಕೆ ಅತ್ಯುತ್ತಮ ಶ್ರೋತೃವೆಂದರೆ ನನ್ನ ಅಮ್ಮನೇ! ''ಮೊನ್ನೆ ಕೆಲಸದವಳು ಬರಲೇ ಇಲ್ಲ ಅಮ್ಮಾ, ಅಂಗಳ ನಾನೇ ಗುಡಿಸಿದೆ. ಆಮೇಲೆ ದೀಪಾವಳಿ ಹಬ್ಬ ಬಂತು. ಮಿಠಾಯಿ ನಾನೇ ಮಾಡಿದೆ. ಅಷ್ಟೇ ಅಲ್ಲ ಅಮ್ಮಾ, ದಿನಾ ಸಾಯಂಕಾಲ ಗಂಡ ಮನೆಗೆ ಬರೋ ಹೊತ್ತಲ್ಲಿ ಮುಡಿಗೆ ಮೂರು ಮಾರು ಮಲ್ಲಿಗೆ ಮುಡಿದು ಮೊಣಕೈ ತನಕ ಗಾಜಿನ ಬಳೆ ತೊಟ್ಟು ಪೂರ್ವಕಾಲದ ಮುಗ್ಧ ಮುತ್ತೈದೆಯ ಹಾಗೆ ಕೈಲಿ ಕಂಚಿನ ಲೋಟದಲ್ಲಿ ಕಡುಕಾಫಿ ಹಿಡಿದು ನನ್ನ ಮನೆ ಬಾಗಿಲಲ್ಲಿ ನಾನೇ ನಿಂತಿರತೀನಿ ಅಮ್ಮಾ...'' ಅಂತೆಲ್ಲ ಮಣಿ ಮಣಿಯಾಗಿ ವರದಿ ಒಪ್ಪಿಸುತ್ತಿದ್ದೆ. ಒಂದು ಸಾರಿ ನಾನು ಹೀಗಂದಾಗ ಅಮ್ಮ ನನ್ನನ್ನೇ ಚೋದ್ಯವಾಗಿ ದಿಟ್ಟಿಸುತ್ತ ''ಚೆನ್ನಾಗಿದೆ ಕಣೇ ಮರೀ ನೀನು ಹೇಳೋ ಮಾತು! ನಿನ್ನ ಮನೆ ಕೆಲ್ಸ ನೀನು ಮಾಡಿಕೊಂಡ್ರೆ, ಬೇರೆ ಯಾರಿಗೇನು ಬಂತೇ ಭಾಗ್ಯ? ಹಿಂದೆ ಹೀಗೇ ಯಾವನೋ ಒಬ್ಬ ಇದ್ನಂತೆ. ಒಂದಿನ ಅವ ಓಡೋಡಿ ಸಂತೆಗೆ ಬಂದು ದಿಬ್ಬ ಹತ್ತಿ ನಿಂತು ''ಮಹಾ ಜನರೇ,

ನಿಮಗೆ ಗೊತ್ತೇ? ಮೊನ್ನೆ ಬರಗಾಲದಲ್ಲಿ ನನ್ನ ಹೆಂಡಿರು - ಮಕ್ಕಳನ್ನು ನಾನೇ ಸಾಕಿದೆ!... ನಾನೇ ಸಾಕಿದೆ!'' ಅಂತ ಕೂಗಿ ಕೂಗಿ ಹೇಳುತ್ತ ತನ್ನ ಭುಜಾನ ತಾನೇ ಪದೇ ಪದೇ ತಟ್ಟಿಕೊಂಡನಂತೆ! ಹಾಗಾಯ್ತು ನೋಡು ನಿನ್ನ ಕತೆ!'' ಅಂದುಬಿಟ್ಟಳು. ಅವತ್ತಿಂದ ನನ್ನ ಸೆಲ್ಫ್‌ಪಿಟಿ ಕಡಿಮೆಯಾಗಿದೆ. ಇತ್ತೀಚೆಗೆ ಒಂದು ಕಡೆ ಆತ್ಮಸ್ತುತಿ ಮಹಾಪಾಪ ಅಂತ ಬೇರೆ ಓದಿಬಿಟ್ಟೆ. ಆವಾಗಿನಿಂದ ನನ್ನ ವಿಷಯಗಳನ್ನು 'ನಾನು' ಅನ್ನುವ ಆತ್ಮಸೂಚಿ ಪದದಿಂದ ಆರಂಭಿಸುವುದಕ್ಕೇನೇ ನನಗೆ ಗಾಬರಿಯಾಗಿದೆ.

ನಾವು ಮಾತು ಹೊರಡಿಸುವ ಮುನ್ನ ನಮ್ಮ ಹಿರಿಯರ ಹಲವಾರು ನಲ್ಮಾತುಗಳನ್ನು ನೆನೆಯಬೇಕಂತೆ ಹಾಗೆ ನಿರಾಳವಾಗಿ ಕೂತು ನಮ್ಮ ಹಿಂದಿನವರ ಕೆಲವು ಮಧುರ ಮಾತುಗಳನ್ನು ಮೆಲುಕು ಹಾಕುವಾಗ ನಿಜವಾಗಿ ಮನಸ್ಸಿಗೆ ಹರ್ಷವಾಗುತ್ತದೆ. ಎಷ್ಟೊಂದು ನಿರ್ಮಲ ಮನಸ್ಕರು ಅವರೆಲ್ಲರು! ಸಣ್ಣ ಸಣ್ಣ ಸಂತೋಷಗಳೇ ಅವರ ಕಾವ್ಯ. ಸರಳತೆ - ಸಮಾಧಾನಗಳೇ ಅವರ ಜೀವನ. ಅಂದಮೇಲೆ ಅವರ ಮಾತು ಸೊಗಸಾಗದೆ ಮತ್ತೇನು।

ಒಂದು ಮುಖ್ಯ ವಿಚಾರ. ಪದದ ಹದ ನಮಗೆ ಸಿದ್ಧಿಸಬೇಕಾದರೆ ಅದರ ಹಿಂದೆ ಇರಬೇಕು ಹೃದಯದ ಹದ. ಯಾಕೆಂದರೆ ಮನಸ್ಸಿನಂತೆ ಭಾವನೆ. ಭಾವನೆಯಂತೆ ಭಾಷೆ. ಇಂಥ 'ಹಿತಮಿತ ಮೃದು ವಚನ' ನಮ್ಮದಾಗಲಿ. ಮಾತಿನ ಈ ಮೋಹಕ ಮಣಿದರ್ಪಣ ಯಾರ ಬಗೆಯನ್ನೂ ಬಗೆಯದೆ ಅರಿವನ್ನು ಅರಳಿಸಲಿ. ಶಾಂತಿ ಸೌಹಾರ್ದಗಳನ್ನು ಮೂಡಿಸಲಿ.

ಇದು ಮನುಷ್ಯತ್ವದ ನಿಜವಾದ ಹಕ್ಕು ಮತ್ತು ಕರ್ತವ್ಯ ಕೂಡ.



''ಬೇಗ ಓಡಿಹೋಗಿ ಇಂಟರ್ನೆಟ್‌ನಲ್ಲಿ 'ಎಮರ್ಜೆನ್ಸಿ ಪ್ರೊಸೀಜರ್ಸ್' ಸೈಟ್ ತೆರೆದು ಓದಿ ಹೇಳಿ. ಓಡಿ''

ಕಂತೆಗೊಂದು ಬೊಂತೆ

- ಎಸ್ಸಾರ್ಮೂರ್ತಿ

ತಾನು ಅರೇಂಜ್ ಮಾಡಿದ ಲಕ್ಸುರಿ ಎಲ್ಲೂ ಡಿರೇಂಜ್ ಆಗದೆ ಹೇಗೋ ಬಂದು ಹಾಸನದ 'ಸುಖನಿವಾಸ' ಸೇರಿದ್ದಕ್ಕೆ ಸಂತುಷ್ಟನಾದ ಗುಂಡ ಸುಸಜ್ಜಿತವಾದ ತನ್ನ ಹೋಟೆಲ್ ಕೋಣೆಗೆ ಮರಳಿದ. ಪಾರ್ಟ್‌ನರ್ ಸೇಠ್‌ಮಕ್ಖನ್ ಮಲ್ ಚಿಕ್ಕನ್‌ಚಂದ್ ಗುಂಡೇರಿಯ, ತನ್ನ ಹೆಂಡತಿಯ ಆಜ್ಞೆಮೀರದೆ ಸಂಜೆಗೆ ಮೊದಲೇ ಸೂಖಾರೋಟಿಗಳನ್ನು ಮಿರ್ಚೀಕಾ ಅಚಾರ್ ನೆಂಚಿಕೊಂಡು ಕಡಿದು (ಕಟ್ಟೆಹಾಕಿ) ಮಲಗಿಬಿಟ್ಟಿದ್ದ. ಗುಂಡೇಶನ ಮುಖಾಂತರ ಗಳಿಸಲಿರುವ ಲಾಭದ ಹಣವನ್ನು ಕನಸಿನಲ್ಲೇ ಎಣಿಸುತ್ತ ದೈವಸಮಾನರಾದ ತೀರ್ಥಂಕರರನ್ನು ಸ್ಮರಿಸಿದ.

ಗುಂಡನೋ, ಬಾರಿನಲ್ಲಿ ತಾನೇ 'ಪರ್ಯಾಯ ತೀರ್ಥಂಕರ'ನಾಗಿ ಕುಳಿತು ಮುಂದಿನ 'ಪ್ಲಾನ್' ಹಾಕತೊಡಗಿದ. ಅಷ್ಟರಲ್ಲೇ 'ಕೊಕೋ, ಕೊಕ್ಕ್, ಕೊರ್ರ್‌ರ್ರ್' ಎಂದು ಕೋಳಿ ಕೂಗಿದಂತಾಯಿತು. 'ಆ್ಞ! ಮೂರೇ ಪೆಗ್ ಇಳಿಸೋದರಲ್ಲಿ ಬೆಳಾಗಿಬಿಡ್ತಾ?' ಎಂದು ತಲೆಕೊಡವಿಕೊಂಡು ಹೊರಗೆ ಬಂದ. ಅಲ್ಲಿ ಹೋಟೇಲಿಗೆ ಕೋಳಿ ಸಪ್ಲೈ ಮಾಡುವ ಯುವಕನೊಬ್ಬ ಸೈಕಲ್ ನಿಲ್ಲಿಸಿ ಎರಡೂ ಕೈಯಲ್ಲಿ 'ಕುಕ್ಕಟ ಗುಚ್ಛ'ಗಳನ್ನು ಹಿಡಿದು ಒಳಗೆ ನಡೆದದ್ದ ಕಂಡ. ಗುಂಡ ಏರಿಸಿದ ತೀರ್ಥ ಮಂಡೆಯ ಮೇಲೆ ಕೆಲಸ ಮಾಡಿತು. ಮತ್ತೆ ಖಾಲಿ ಕೈನಲ್ಲಿ ಹೊರಗೆ ಬಂದ ಆ ಚುರುಕಾದ ಹುಡುಗನನ್ನು ಕೂಗಿದ.

'ಬಾರಣ್ಣ, ಇಲ್ಲಿ....' ಯುವಕ ಸಮೀಪಿಸಿದ.

'ನೀ ತಂದ ಕೋಳಿಗೊಳು... ನಾಟೀನಾ, ಗಿರಿರಾಜಾನಾ? ಈ ಐಬ್ರಿಡ್ಡು ಸೀಮೆಕೋಳಿ ರಬ್ಬರ್ ಜಗಿದಂಗಿರ್ತವೆ... ಏನು, ಪಾರಂ ಮಡಗಿದೀಯಾ?' ತನ್ನ ಕಸುಬಿನಲ್ಲಿ ಆಸಕ್ತನಾದ ಟಿಪ್‌ಟಾಪ್ ವ್ಯಕ್ತಿಯ ಬಗ್ಗೆ ಯುವಕ ಆದರ ತಳೆದ... 'ನಿಮ್ಗೇ ಗೊತ್ತೈತಲ್ಲ ಬುದ್ದಿ... ನಾಟಿ ರುಚಿಯಾಗಿರ್ತವೆ... ಆದರೆ ರೇಟು ಗಿಟ್ಟಾಕಿಲ್ಲವೇ! ಅಲ್ದೆ ಈ ಡಿಪಾರ್ಟ್‌ಮೆಂಟ್‌ನೋರು ಬಂದು ಸೀಮೆ ಕೋಳಿ ಬೆಳಸು ಅಂತ ಗೋಳುಯ್ತಾರೆ... ಈಚೆಗೆ, ಅದೇನೋ ಮೂಳೇನೇ ಇಲ್ಲದ ಕೋಳಿ ತಳಿ ಅಂತೆ... ಬೆಳಸಬೇಕಂತೆ. ಅದೆಂಗ್ರಾ ಆಯ್ತದೆ?''

'ನೀನೇಸಂತೀ....'

'ಅದು ಮಂಡೆ ಇಲ್ದ ಮನುಸರಂತೆ ಅಂತೀನಿ'

'ಅದಿರ್ಲಿ,... ನಿನ್ನೆಸ್ರೇನು?'

'ಯಾಲಕ್ಕಿ ಬುದ್ದಿ.... ಯಾಲಕ್ಕಿಗೌಡ'

'ಒಂದು ಸಣ್ಣ ಕೆಲ್ಸ ಮಾಡೀಯಾ?... ಕಾಸು ಕೊಟ್ಟೇನು'

'ಏಳಿ ಬುದ್ದಿ.... ಕಸ್ಟ ಇಲ್ಲ ತಾನೇ?'

'ಏನಿಲ್ಲ.... ನಾಳೆ ಬೆಳಿಗ್ಗೆ ನಮ್ಮ ಸೇಟು ಅತ್ರ ಬಂದು... ಇಲ್ಲೇ ಪಕ್ಕದ ರೂಂನಲ್ಲೇ... ನಾ ಏಳ್ಕೊಟ್ಟಂಗೆ ಏಳಬೇಕು... ನೂರು ರೂಪಾಯಿ ಕೊಡ್ತೀನಿ'

'ಆಯ್ತು... ಏನೇಳ್ಬೇಕು?' ಗುಂಡ ಅವನ ಕಿವಿಯಲ್ಲಿ ಏನೋ ಉಸುರಿದ.

'ಅಷ್ಟೇಯಾ.... ಏಟೊತ್ತಿಗೆ ಬರ್ಲಿ?'

'ಎಂಟು ಗಂಟೆ ಒಳಗೆ'

ಹೀಗೆ ಯಾಲಕ್ಕಿಯೊಡನೆ ಒಪ್ಪಂದ ಮಾಡಿಕೊಂಡು, ಆತ ಸಪ್ಲೈ ಮಾಡಿದ್ದ ಕೋಳಿಯ ಫ್ರೈಡ್ ಚಿಕನ್ ಪ್ರಸಾದ ಸ್ವೀಕರಿಸಿ ತೃಪ್ತನಾಗಿ ಗೊರಕೆ ಹೊಡೆದ, ಗುಂಡೇಶ.

ಬೆಳಿಗ್ಗೆ ಏಳೂವರೆಗೇ ಹಾಜರಾದ ಈ ಕೋಳಿ ಯಾಲಕ್ಕಿಯೊಡನೆ ಗುಂಡ ಸೇಟಿನ ರೂಂ ಪ್ರವೇಶಿಸಿದ. ಮಕ್ಕನ್‌ಮಲ್ಲ ಆಗಲೇ ಸ್ನಾನ, ಪೂಜೆ ಮುಗಿಸಿ ಹೆಂಡತಿಯೇ ಕೊಟ್ಟಿದ ದಪ್ಪ ಕಾರಾಸೇವೆ ತಿಂದು, ಟೀ ಕುಡಿದು ಲೆಕ್ಕಾಚಾರ ನೋಡುವುದರಲ್ಲಿ ತೊಡಗಿಬಿಟ್ಟಿದ್ದ.

'ಗುಡ್‌ಮಾರ್ನಿಂಗ್ ಸೇಟ್‌ಜಿ, ನೋಡು ನಾ ಏಳಿದ ಉಡುಗ ಬಂದವ್ನೆ.'

'ಇವನಾ ಉಡ್ಗಾ?... ಎಮ್ಮೆಲ್ಲೆ, ಮಿನಿಷ್ಟರ್ ಅಂಗೆ ಕಾಣೋಕಿಲ್ಲಾ!'

'ಇವನಲ್ಲ ಸೇಟು ಎಮ್ಮೆಲ್ಲೆ, ಇವನ ಸೋದರಮಾವ, ಇವ ಕೋಳಿಪಾರಂ ನಡಸ್ತಾನೆ'

'ನೋಡು ಗುಂಡೇಸ್ವರ್, ನಿನ್ಮೇಲೆ ನಂಬ್ಕೆ ಮಡಗಿ ರೂಪ್ಯೆ ಕೊಡ್ತಾ ಬಂದಿದೀನಿ. ನೀನು ಇಂತಾ ಕೋಳಿಮರಿಕೈಲಿ ನಂದು ಕೆಲ್ಸ ಮಾಡಿಸ್ತೀನಿ ಅಂತೀಯ!'

ವಿಷಯದ ಹಿನ್ನೆಲೆ ಹೀಗಿತ್ತು: ಗುಂಡ ಗುಂಡೇರಿಯನನ್ನು ಒಂದು ಹೊಸಾ 'ಪ್ರಾಫಿಟ್ ಬಿಜ್ನೆಸ್' ಮಾಡೋಕೆ ಕರ್ಕೊಂಡು ಬಂದಿದ್ದ. 'ಆಸನದಾಗೆ ಎಮ್ಮೆಲ್ಲೆ,

ಮಿನಿಷ್ಟ್ರು ನನ್ನ ನೆಂಟ್ರು... ಇನ್‌ಫ್ಲೂಯೆನ್ಸ್ ಮಾಡಿಸಿ ಒಂದು ಪೆಟ್ರೋಲ್ ಬಂಕ್ ಪರ್ಮಿಟ್ ಕೊಡುಸ್ತಿನಿ' ಅಂತ ಬುರುಡೇನೂ ಬಿಟ್ಟಿದ್ದ. 'ಸೀಮೆ ಎಣ್ಣೆ ಸಪ್ಲೆ ತಾನು ಮಾಡಿ, ಅಂದರೆ ಬಿಜ್ನೆಸ್‌ನಲ್ಲಿ 'ಪಾರ್ಟ್‌ನರಿ' ಯಾಗುವ ಕನಸಿನಲ್ಲಿ, ಪೆಟ್ರೋಲು, ಡೀಜಲ್ ಇತ್ಯಾದಿ ಖರ್ಚುಗಳನ್ನು ವಹಿಸಿಕೊಳ್ಳುವ ಸೇಠನಿಗೆ ಅನ್ಯಾಯದ ಕಲಬೆರಕೆ ವಿಧಾನಗಳನ್ನು ಕಲಿಸಿ, ಬರುವ ಲಾಭದಲ್ಲಿ ಅರ್ಧ-ಅರ್ಧ ನ್ಯಾಯವಾಗಿ ಹಂಚಿಕೊಳ್ಳುವ ಹೊಂಚು ಗುಂಡನದು. ಹಾಗೇ ತನಗೆ ಅಪರಿಚಿತವಾದ ಹಾಸನಕ್ಕೆ ಸೇಟನ್ನು ಮಪದಾಸೆ ತೋರಿ ಎಳೆದುಕೊಂಡು ಬಂದಿದ್ದ. ಈ ವ್ಯವಹಾರವೆಂಬ ನಾಟಕದ ಒಂದಂಕ ಕೋಳಿ ಯಾಲಕ್ಕಿಯ ಪರಿಚಯ ಮಾಡಿಕೊಂಡದ್ದು, ಅವನಿಗೆ 'ಪಂಪ್' ಹೊಡೆದದ್ದು.

'ಏನಾಯ್ತಯ್ಯ ಯಾಲಕ್ಕಿ, ನಾ ಹೇಳಿದ್ದು... ಇಕಾ ಸೇಟೂ ಬಂದವ್ರೆ.'

'ಮಾವಾರಿಗೆ ಏಳಿದೀನಿ... ಪಾಲ್ಟಿ ನಿನಗ್ಗೊತ್ತಾ ಚಂದಾಗಿ? ಅಂತ ಕೇಳಿದ್ರು.'

'ಇವತ್ತು ಕರ್ಕೊಂಡೋಗೀಯಾ ಅವರ ಮನೇತಾಕ್ಕೆ, ನಮ್ಮನ?'

'ಅವ್ರು, ಫ್ಯಾಮಿಲಿ ಎಲ್ಲಾ ದರ್ಮಸ್ತಳ ಉಡ್ಪಿ ಯಾತ್ರೆ ಓಗವ್ರೆ, ಅಂಗೇ ಅಯ್ಯಪ್ಪಂಗೂ ಹೋಗಬೌದು... ಅಲ್ದೇ ಅಳ್ಳಿನಾಗೆ ರತೋಸ್ತವ ಐತೆ... ಇನ್ನು ತಿಂಗಳ ಮ್ಯಾಗೇ ಅವರು ಸಿಗೋದು'

'ಅಂಗಾರೆ ನಮ್ಕೆಲ್ಸ'

'ಒಂದೂ ತಿಂಗ್ಳು ಆದ್ರೆ ಹೆಂಗೆ ಗುಂಡೇಸರ್....? ಸೇಟು ನಿಟ್ಟುಸಿರಿದ.

'ನೀವೇನು ಯೇಚ್ನೆ ಮಾಡ್ಕಬೇಡಿ... ನೀವು ಎಂತೋರು ಅಂತ ಮಾವಗೆ ಏಳೀನಿ... ಬೆಂಗ್ಳೂರಾಗೇ ಓಗಿ ನೋಡೋರಂತೆ..... ನಿಮ್ಕೆಲ್ಸ ಗ್ಯಾರಂಟಿ ಆತದೆ ಬುಡಿ'

'ಸದ್ಯ ಅಷ್ಟು ಮಾಡಪ್ಪ ಯಾಲಕ್ಕಿ, ಪರ್ಮಿಟ್ ಸಿಕ್ಕಿದ್ರೆ ಲಕ್ಕಿ, ಇಲ್ದಿದ್ರೆ ನಾವಾಯ್ತೀವಿ ಅವಲಕ್ಕಿ' ಪ್ರಾಸ ಹೊಡೆದ ಗುಂಡ, ಸೇಟಿನ ಹತ್ತಿರ ಹೋಗಿ 'ಒಂದು ಮುನ್ನೂರು ಕೊಡು, ಮುಂದೆ ಬೆಳೀತದೆ' ಅಂದ.

ಮುಂಬರುವ ಬೆಳೆಗೆ ಬಿತ್ತುವ ಬೀಜವೆಂದು ಮಕ್ಖನ್‌ಮಲ್ಲ ಭಕ್ತಿಯಿಂದ ಮೂರು ಹಸಿರನ್ನು ಚೀಲದಿಂದ ತೆಗೆದಾಕ್ಷಣ ಗುಂಡ ಅವನ್ನು ಕಸಿದ.

'ನಿನ್ನ ಕಾಸಿಗೆ ಮೋಸ ಮಾಡಾಕಿಲ್ಲ ಯಾಲಕ್ಕಣ್ಣಾ, ನಂಕೆಲ್ಸ ಆಗ್ಲಿ, ನಿಮ್ಮ ಅಳ್ಳಿ ವಿಲೇಜ್ ಅಕೌಂಟೆಂಟ್ರಂಗೆ ಮಾಡ್ತೀವಿ ನಿನ್ನ... ನಮ್ಮ ಸೇಟಜೀ ಅಂತವರು.'

ಅವನನ್ನು ಬೀಳ್ಕೊಡುತ್ತ, 'ನಿಂಗೇನೇ ಬೇಕಾರೂ ಕೇಳ್ಕ, ನಾನಿದೀನಿ ಜತೇಗೇಯ' ಎಂದು ತನ್ನ ಪಾಲನ್ನೂ ಮೀಸಲು ಮಾಡಿಕೊಂಡ.

'ಆಯ್ತು' ಎಂದು ಹೊರಟ ಕುಕ್ಕುಟಧರನ ಕೈಲಿ ನೂರಿತ್ತು ಇನ್ನೂರನ್ನು ತನ್ನ ಜೇಬಿಗಿಳಿಸಿ 'ನಾಳೇನೂ ಬಂದು ನೋಡು, ಏನಾರಾ ಸಮಾಚಾರ ಇದ್ರೆ' ಅಂದ. ಗುಂಡ ಯಾಲಕ್ಕೀನ ಡಿಸ್‌ಪ್ಯಾಚ್ ಮಾಡಿ ಒಳಗೆ ಮರಳುವಷ್ಟರಲ್ಲಿ ಟೆಲಿಫೋನ್ ರಿಂಗ್ ಆಯಿತು. ರಿಸೀವರ್ ಕೈಗೆತ್ತಿಕೊಂಡ.

'ಅಲ್ಲೋ!.... ಓ, ಮಾಯಾಮೇಡಮ್ಮಾ?... ಎಂಗಿದೀರಿ? ಯಾಕೆ ಇವತ್ತು ಬರ್ಲಿಲ್ಲ? ಕಾರ್ ಸರೀಗಿಲ್ವ?... ಆ... ನಾಳೇನೂ ಬರಾಕಿಲ್ವಾ? ಅಂಗೆ ಮಾಡ್ಬೇಡಿ ಮೇಡಂ... ಬಾರಿ ಲಾಸಾಗ್ತದೆ... ನೀವು ಬೇಲೂರು ನೋಡ್ಬೇಕು ಅಂದ್ರಿ ಅಂತ ಔಟ್‌ಡೋರ್ ಇಲ್ಲೀಗೆ ಆಕ್ಕಂಡೆ... ಲೊಕೇಸನ್ ಯಲಂಕದಾಗೇ ಸಾಕಾಗಿತ್ತು... ಎಲ್ಲ ಬಸ್ ಆರ್ಟಿಷ್ಟು, ಕ್ರೂ ಬಂದವ್ರೆ...' ಅಂಗಲಾಚಿದ ಗುಂಡ.

ಬೆಂಗಳೂರಿನ ಸ್ವಗೃಹದಲ್ಲಿ ತನ್ನ ಹಾಸಿಗೆಯ ಮೇಲೇ ಕೂತು ಉತ್ತರಿಸಿದಳು ಹೀರೋಯಿನ್ನು.

'ಸರಿ ಗುಂಡೇಶಣ್ಣ, ಏನ್ಮಾಡೋದು ನಾನು ತುಂಬಾ ಲವ್‌ಮಾಡೋ ಪೆಟ್ಟು...'

'ಅಯ್ಯಯ್ಯೋ ಮೇಡಂ... ಲವ್‌ನಾಗೆ ಬಿದ್ರಾ? ಜೋರಾಗಿ ಬಿದ್ದದಾ ಪೆಟ್ಟು?...'

'ಗುಂಡೇಶಣ್ಣಾ... ನೀವು ಪ್ರಡ್ಯೂಸರ್‌ಗಳು ಕಾಯೋದೇ ಅದಿಕ್ಕೆ ಅಂತ ಗೊತ್ತು. ಇದು ಆ ಪೆಟ್ಟಲ್ಲ... ನನ್ನ ಪೆಟ್ಟು 'ಸಾಯಿರಾ'ಗೆ ತುಂಬಾ Fever ಆಗ್ಬಿಟ್ಟಿದೆಯಲ್ಲಾ... ಹೇಗೆ ಬಿಟ್ಟು ಬರ್ಲೀ....'

'ಸಾಯ್ರಾ ಅಂದ್ರೆ ನಾಯೀನಾ ಮೇಡಂ? ಅದೇ ಟರ್ಕಿಟವಲ್ನಂಗಿರ್ತವಲ್ಲ?'

'ಅಯ್ಯೋ... ಥೂ... ಇದು ನನ್ನ ಪುಸ್ಸಿಕ್ಯಾಟು... ಒಂದು ಮಿನಿಟ್ನೂ ನನ್ನ ಬಿಟ್ಟಿರೊಲ್ಲಾ ಗುಂಡೇಶ್... ಬೇಕಾದರೆ ನಮ್ಮಮ್ಮನ್ ಕೈಲಿ ಮಾತಾಡು' ಎಂದು ರಿಸೀವರ್ ತನ್ನ ತಾಯಿಗಿತ್ತಳು, ಗುಂಡ ಮಾತಾಡಿದ.

'ಮಮ್ಮೀ... ಒಂದಿನ ಸೂಟಿಂಗ್ ಇಲ್ಲಾಂದ್ರೆ ಲಕ್ಸಗಟ್ಲೆ ಲಾಸು ಮಮ್ಮೀ... ನನ್ಮಾತು ಕಾಲಿ ಮಾಡಬ್ಯಾಡಿ... ಎಂಗಾನಾ ಬನ್ನಿ ಮಮ್ಮಿ... ರಿಜರ್ವ್ ರೂಂಗಳೆಲ್ಲಾ ಕಾಲಿ ಬಿದ್ದವೆ....'

'ಯಾರ್‍ರಿ. ಗುಂಡೇಶಾನಾ?... ಬೇಬಿ ಏಳ್ಲಿಲ್ಲ್ವಾ, ಸಾಯ್ರ್ಾಗೆ ಜರ ಬಂದದೆ ಅಂತ... ಪಾಪ ನೆನ್ನಿಂದ ಕಣ್ಣೇ ಮುಚ್ಚಿಲ್ಲ ಬೇಬಿ... ಸೂಟಿಂಗ್ ಕ್ಯಾನ್ಸಲ್ ಮಾಡ್ಕಳ್ರೀ'

'ಮಮ್ಮಿ, ಬೇಬಿ ಅಂಗೆ ಸಾಯ್ರ, ಸಾಯ್ರ ಅಂತಾ ಇದ್ರೆ ಇಲ್ಲಿ ನಾವು ಯೂನಿಟ್ನೋರು ಸಾಯ್ತಾನೇ ಇದೀವಲ್ಲ! ನಂ ಕಸ್ಟ ನೋಡು ಮಮ್ಮಿ....'

ಗುಂಡನಿಗೇನು ಗೊತ್ತು? ಈ ಮಾಯಾದೇವಿಗೆ ಜನ್ಮವಿತ್ತ ಮಹಾತಾಯಿ, ಅರ್ಧರಾತ್ರಿಯಲ್ಲಿ ಕೊಡೆ ಹಿಡಿದು ನಿಂತವಳು, ಲಂಕೆಯನ್ನು ಕಾಯಲು ನಿಂತ ಲಂಕಿಣಿಯನ್ನು ಮೀರಿ, ತನ್ನ ಭಾಗ್ಯಲಕ್ಷ್ಮಿ 'ಮಾಯಾದೇವಿ'ಯನ್ನು ನಿರ್ಮಾಪಕರ ಅಸ್ತ್ರಗಳಿಂದ ಪಾರು ಮಾಡಲೆಂದು ಜಿಹ್ವಾಸ್ತ್ರಕ್ಕೆ ಬ್ಯಾಡಗಿ ಗುಂಟೂರು ಬ್ರಾಂಡುಗಳ ಸವಿಯನ್ನೊಡ್ಡಿ ಸಿದ್ಧಳಾಗಿದ್ದಳೆಂದು! ತನ್ನ ಮುದ್ದು ಮಾರ್ಜಾಲಕ್ಕೆ ಬಂದ ಜ್ವರದಿಂದ ಮಾನಸಿಕವಾಗಿ ಬೆಂದು ಸೊರಗುತ್ತಿದ್ದ ಪ್ರೀತಿಯ ಮಗಳ ಪ್ರಾಣಿದಯೆ ಹೆಚ್ಚೋ ಒಂದು ದಿನದ ಟೀವಿ ಸೂಟಿಂಗ್ ಕ್ಯಾನ್ಸಲ್ ಮಾಡಿದ ಲಾಸು ಹೆಚ್ಚೋ!

ಪ್ರಾಣಿದಯೆ! ಈ ತೀರ್ಮಾನಕ್ಕೆ ಬಂದದ್ದೇ ತಡ, ತನ್ನ ದರ್ಪವನ್ನೆಲ್ಲ ಧಾರೆ ಎರೆದು ಟೆಲಿಫೋನ್ ರಿಸೀವರಿನ ಬೆಂಗಳೂರು ತುದಿಯಲ್ಲಿಂದ ಕುಟ್ಟಿದಳು ಮಮ್ಮಿ.

'ಯ್ಯೋ... ಆಗಾಗಿಲ್ಲ ಅಂದ್ರೆ ಆಗಾಕಿಲ್ಲ... ಒಂದೆಲ್ಡುದಿನ ಬೇಬಿ ಬರಾಕಿಲ್ಲ... ಸೂಟಿಂಗ್ ಕ್ಯಾನ್ಸಲ್ ಮಾಡ್ಕಳಿ... ಏನೂ? ದಮ್ಮಯ್ಯಾನಾ?... ಲೇ ಗಂಡ್ಸೇ... ನೇಣಾಕ್ಕ ಓಗಿ... ನಾಳೆ ಸಾಯ್ರಾ ಸರೀಓದ್ರೆ ನೋಡಾನಾ ಒಂದ್ಕೆಲ....ಅಡ್ವಾನ್ಸ್ ಕೊಟ್ಟಿದೀಯಾ?... ನಿನ್ನ ಇಪ್ಪತ್ತೈದು ಮಕದ ಮ್ಯಾಲೆ ಎಸೀತೀವಿ... ಬ್ಯಾರೆ ಉಡಿಕ್ಕಾ... ಎಚ್ಗೆ ಮಾತು ಬೇಕಿಲ್ಲ.'

ಈ ಮಿತಭಾಷೆಯ ಆಘಾತದಿಂದ ರಿಸೀವರ್ ಕೆಳಗಿಟ್ಟ ಗುಂಡ ಮುಖಾ ಒರೆಸಿಕೊಂಡ.

'ಎಲಾ ಇವಳ! ಇದೇನು ಎಂಗ್ಸಾ ಎಮ್ಮಾರೀನಾ! ಇವಳ ಮಗಳು ಬಿಟ್ಟಿ ಕಾರ್ಪೊರೇಸನ್ ಪ್ರೋಗ್ರಾಂನಾಗೆ ಕುಣೀತಿದ್ದೋಳ್ನ ಈರೋಯಿನ್ ಮಾಡಿದ್ದೇ ತೆಪ್ಪಾತೇ! ಮಾಯವ್ವ, ಎಲ್ಡು ಸೀರಲ್ ಕ್ಲಿಕ್ಕಾತೂಂತ ನಂಗೇ ಉಗಿಸ್ತೀಯಾ?... ಲೌಡಿ, ಟೀಂ ಬರ್‍ಲಿ ತೋರುಸ್ತೀನಿ ನಿಂಗೆ, ನಿಮ್ಮವ್ವ್ಗೆ....' ಎಂದುಕೊಂಡು ಮರವಣಿಸಿದ.

ಇವನ ತಳವಮಳವನ್ನು ಗಮನಿಸಿದ ಚಾಲೂಕ್ ಸೇಟು ವಿಚಾರಿಸಿದ.

'ಏನಪ್ಪಾ... ಉದ್ಗೀದು, ಗಲಾಟೆ!'

ಒಂದು ನಿಮಿಷದಲ್ಲಿ ಮಾಯೆಯ ಬಲೆಯಿಂದ ಆಚೆ ಬಂದು ಪ್ಲೇಟು ತಿರುಗಿಸಿದ ಗುಂಡ.

'ಏನಿಲ್ಲ ಸೇಟ್‌ಜಿ... ಈರೋಯಿನ್ ಮಾಯಾದೇವಿಗೆ ಮೈ ಉಸಾರಿಲ್ವಂತೆ... ವಸಿದಿನ ರೆಷ್ಟಲ್ಲಿರು, ಇಲ್ಲಾಂದ್ರೆ ನಮೂನಿಯಾ ಆಗಿ ಮೇಲೇರಿಯಾಕ್ಕೆ ತಿರುಗಬೈದು ಅಂದ್ರಂತೆ ಡಾಕಟ್ರು' ಎಂದು ಅವನು ಮಾಯೆಯ ಮಾತಾ 'ಮೇಲೇರಿಯ'ದ ನಮೂನೆಯ ಚುರುಕನ್ನು ಮರೆಮಾಚಿದ.

'ಸೂಟಿಂಗ್ ಏನು ಮಾಡ್ತೀಯಾ ಗುಂಡೇಸರ್?'

'ನೀನೂ ಬಂದಿದೀಯಾ ಇಲ್ಲೀಗೆ ಅಂದಮ್ಯಾಗೆ... ಎಂಗಾನಾ ಆಗ್ಲಿ ಗುಂಡೇಶ್, ನಾಳೆ, ಬಂದೇ ಬತ್ತೀನಿ... ನಿಂಗೋಸ್ಕರ'... ಅಂದವ್ನೆ, ಪಾಪ ಎಷ್ಟು ಜರಾನೋ ಏನೋ!

'ಅಖ್ವಾದಿನ ವೇಷ್ಟಾ?.. ಎಷ್ಟೊಂದೂ ರೂಪೈ ಗುಂಡೇಶ್ ಸಾಮೀ' ಎಂದು ಹಲುಬಿದ ಸೇಟನ್ನು ಸಮಾಧಾನಗೊಳಿಸುತ್ತ ಗುಂಡ ತಿಳಿಸಿದ.

'ಯೋಚ್ನೆ ಬ್ಯಾಡ... ನಾಳೆ ಸೂಟಿಂಗ್ ರಜಾ ಆಕ್ಬುಡಾನಾ... ಸೀನಿಯರ್ ಆರ್ಟಿಸ್ಟ್‌ಗಳ್ಗೆ ಆಫ್ ಪೇಮೆಂಟು, ಉಳಿಕೇರ್ಗೆ ಬರೇ ಊಟ, ಎಲ್ಡೊತ್ತು. ಬಾಕಿ ಕರ್ಚು ಎಂಗೂ ಕಂಟ್ರಾಕ್ಟು ಅಲ್ವಾ?'

ಒಳಗೆ ಮಾತ್ರ 'ಎಲಾ ಮಾಯಾಂಗನೇ... ಚೋರ ವಿಧವೇ... ಇಷ್ಟು ಕೊಬ್ಬಾ ನಿಂಗೆ... ಇಳುಸ್ತೀನಿ ತಕೋ ಸದ್ಯದಾಗೇಯ' ಎಂದು ತನ್ನ ಅಳಲನ್ನು ನುಂಗಿಕೊಂಡು ಗುಂಡ ಹುಂಡೈ ಹತ್ತಿ 'ಸುಖನಿವಾಸ' ತಲಪಿದ, ಚಂದ್ರೂಗೆ ಸಂದೇಶ ನೀಡಿದ.

'ಸೇಟ್‌ಜಿ, ಗುಂಡೇಶಣ್ಣ ಅರ್ಜೆಂಟ್ ಕೆಲಸದ ಮೇಲೆ ಹೋಗಬೇಕಾದ್ದರಿಂದ ಇವೊತ್ತು ಸೂಟಿಂಗ್ ರಜಾ... ಬೇಕಾದೋರು ಬೇಲೂರು ಅಳೇಬೀಡು ನೋಡಿ ಬನ್ರಿ. ಯಾರಾದರೂ ಎಂಗಸರ್ಗೆ ಸುಕ್ನಿವಾಸದಾಗೆ ಮುಜುಗರ ಆದ್ರೆ ಪೈವ್‌ಸ್ಟಾರ್ ರೂಂ ನಂ. 426ಕ್ಕೆ ಬರಬೌದು. ಗ್ಯಾಪ್ನ ಇರ್ಲಿ 426ಕ್ಕೆ... 425 ದಾಗೆ ಸೇಟ್ ಠಿಕಾಣೆ ಆಕವ್ನೆ'


ಚಂದ್ರು, ರುಸಿಂಗನ ಬ್ರೆಕ್‌ಪಾಸ್ಟ್ ಮೆದ್ದು ಲೊಕೇಸನ್ನಿಗೆ ರಡಿಯಾಗಿದ್ದ ಎಲ್ಲರಿಗೂ ಅನೌನ್ಸ್‌ಮೆಂಟ್ ಕೊಟ್ಟ.

'ಕೇಳ್ರಪ್ಪೋ!... ಇವತ್ತು ಕ್ಯಾಂಪ್ನಾಗೇ ಇವಾಗ್ಲೇ, ಪ್ಯಾಕಪ್ಪು... ಇತ್ಯಾದಿ... ಇತ್ಯಾದಿ...'

ಒಂದು ದಿನ ಇನ್ಸಿಟ್ಯೂಟ್‌ಗೆ ರಜಾ ದಂಡವಾಯಿತೆಂದು ಯೋಚಿಸುತ್ತಿದ್ದ ರಂಗಣ್ಣನ ಬಳಿಗೆ ಶಿವಾಜಿಯೊಡನೆ ಮುಸಿನಗುತ್ತ ಬಂದ, ಜೋಕರ್ ಶೇಖರ.

'ರಾವ್‌ಜೀ, ರಾಮಚಂದ್ರಪ್ಪ ಬ್ಯಾಡ ಅಂದ್ರೂ, ಮಾಯಾ ಈರೋಯಿನ್ ಆಕ್ಕಂಡ ಗುಂಡ, ಈಗ ಸುರು ಮಾಡವಳೆ ತಿನ್ನೋಕೆ, ಚಳ್ಳೇ ಅಣ್ಣ, ಕಾಣ್ತದೆ! ಇವನ ಅರ್ಜೆಂಟು ನಮಗ್ಗೊತ್ತಿಲ್ವಾ?... ಅವಳ ಕೈಲಿ ಉಗಿಸ್ಕೊಳೋದು. ಒಟ್ನಲ್ಲಿ ನಮಗೆ ಸಂಬಳ ಕಟ್ಟು' ಎಂದು ಬೇಲೂರ ಚನ್ನಕೇಶವನನ್ನು ಸ್ಮರಿಸಿದ.

'ಈ ಗುಂಡನ ಕಂತೆಗೆ ಸರಿಯಾಗದೆ ಬೊಂತೆ, ನಡೀರಿ ಸಾರ್ ಸುಸ್ತಾಡಿ ಆದರೂ ಬರೋಣ ಸ್ವಲ್ಪ ಹೊತ್ತು!' ಎಂದು ರಂಗಣ್ಣನಿಗೆ ಹೇಳುತ್ತ ಶಿವಾಜಿ ಮುನ್ನಡೆದ.



''ಚೈನಾ ಮೊಬೈಲ್ ಸಾರ್ ಇದು. ನೇರವಾಗಿ ರಾಂಗ್ಜೀ ಹತ್ರ ಮಾತಾಡ್ಬೋದು''

ಲಜ್ಜೆ

– ಅಣ್ಣಾಸ್ವಾಮಿ ಮೊದಲಿಯಾರ್

ಮನುಷ್ಯನ ಜೀವನದಲ್ಲಿ ಲಜ್ಜೆಗೂ ವಜೆ (ಬೆಲೆ) ಇದೆ. ಲಜ್ಜೆ ಮಾನವನ ಜೀವನದಲ್ಲಿ ಹಾಸುಹೊಕ್ಕಾಗಿ ಬಂದಿದೆ. 'ಲಜ್ಜಾಹೀನಂಪಶು' ಎಂಬ ಮಾತಿದೆ. ಲಜ್ಜೆ ಇಲ್ಲದವನು ಪಶುವಿಗೆ ಸಮಾನ ಎಂಬ ಮಾತಿನಲ್ಲಿ ಎಷ್ಟೊಂದು ಅರ್ಥವಿದೆ. ಪ್ರಾರಂಭದಲ್ಲಿ ಮಾನವನಿಗೆ ಲಜ್ಜೆ ಎಂಬುದಿರಲಿಲ್ಲ, ಜ್ಞಾನ ಫಲ ಸೇಬನ್ನು ತಿಂದಮೇಲೆ ಅವನಿಗೆ ಜ್ಞಾನೋದಯವಾಗಿ ಲಜ್ಜೆಯೆಂಬುದು ಮೈಯಲ್ಲಿ ಮೂಡಿತು ಎಂದು ಹೇಳುತ್ತದೆ ಕ್ರೈಸ್ತ ಪುರಾಣ.

ಒಂದು ದಿನ ಕಾಳಿದಾಸನ 'ಶಾಕುಂತಲ' ನಾಟಕದ ಕನ್ನಡಾನುವಾದ ಓದುತ್ತಿದ್ದೆ. ಅದರಲ್ಲಿ ಕಣ್ವ ಋಷಿಗಳು ಆಶ್ರಮದಲ್ಲಿಲ್ಲದಿದ್ದಾಗ ಬೇಟೆಗೆಂದು ದುಷ್ಯಂತ ಅಲ್ಲಿಗೆ ಬಂದಾಗ ಕಮಲವೆಂದು ತಿಳಿದು ಶಾಕುಂತಲೆಯ ಕೆನ್ನೆ ಕಚ್ಚಲು ದುಂಬಿಯೊಂದು ಬಂದಾಗ, ಕನ್ಯೆ ಹೆದರಿದ್ದಾಳೆ. ದುಷ್ಯಂತ ಹಾರಿಬಂದು ದುಂಬಿಯನ್ನು ಓಡಿಸುತ್ತಾನೆ, ಆಗ ದುಷ್ಯಂತನನ್ನು ಕಂಡ ಶಾಕುಂತಲೆ ನಾಚಿದ್ದಾಳೆ. ದುಷ್ಯಂತನನ್ನು ಕಂಡು ಲಜ್ಜಿತಳಾದ ಶಾಕುಂತಲ ಬಿಲ್ಲಿನಂತೆ ಮೈಬಾಗಿಸಿ, ಬೆದರಿ ತಲೆಬಾಗಿ, ತುಟಿಗಳ ಮೇಲೆ ನಗೆಸೂಸಿ, ಕೆನ್ನೆಯಲ್ಲಿ ಕೆಂಪು ಓಕುಳಿ ಮೂಡಿಸಿ, ಹರಿಣ ನಯನಗಳಿಂದ ಕುಡಿನೋಟ ಬೀರುತ್ತಾಳೆ. ಆ ನೋಟಕ್ಕೆ ತತ್ತರಿಸಿದ ದುಷ್ಯಂತ, ತಾನು ವಿವಾಹಿತ, ದೇಶದ ಚಕ್ರವರ್ತಿ, ತಾನಿರುವುದು ಪವಿತ್ರ ಕಣ್ವಾಶ್ರಮದಲ್ಲಿ ಎಂಬುದನ್ನು ಮರೆತು ಪ್ರೇಮಪಾಶದಲ್ಲಿ ಸಿಕ್ಕಿ ಬೀಳುತ್ತಾನೆ. ಎಲ್ಲ ಆಭರಣಗಳಿಗಿಂತ ಲಜ್ಜೆ ಹೆಣ್ಣಿಗೆ ಭೂಷಣ. ಲಜ್ಜೆ ತುಂಬಿದ ಹೆಣ್ಣಿನ ನೋಟ ವಜ್ರಾಯುಧಕ್ಕಿಂತ ಮಹತ್ತರವಾದದ್ದು.

ನನ್ನ ಬಾಲ್ಯಗೆಳೆಯ ಪರಮೇಶಿ ವಧು ಪರೀಕ್ಷೆಗೆ ಹೊರಟಿದ್ದ. ನಾನು ಹೊಸದಾಗಿ ಹೊಲೆಸಿದ್ದ ಸೂಟನ್ನು ಒಂದು ದಿನದ ಬಾಡಿಗೆಗೆಂದು ಹೇಳಿ ಪಡೆದು ಅಲಂಕಾರ ಮಾಡಿಕೊಂಡು, 'ಈ ದಿನ ನೋಡುವ ಹೆಣ್ಣಿಗೆ ಏನೆಲ್ಲಾ ಪ್ರಶ್ನೆ ಕೇಳಿ ಪೇಚಿಗೆ ಸಿಕ್ಕಿಸುತ್ತೀನಿ'' ಎಂದು ನಮಗೆಲ್ಲಾ ಹೇಳಿ ಹೊರಟ. ನಾನು ಅವನ ಜೊತೆ ಹೋಗಿದ್ದೆ. ಹೆಣ್ಣಿನ ಮನೆಯವರು ಕೊಟ್ಟ ಮೆಣಸಿನಕಾಯಿ ಬೋಂಡಾ, ಕೇಸರಿಬಾತ್, ಅವರೇಕಾಯಿ ಉಪ್ಪಿಟ್ಟು ತಿಂದು ದೊಡ್ಡ ಲೋಟದಲ್ಲಿ ಬಾದಾಮಿ ಹಾಲು ಕುಡಿದ ಮೇಲೆ, ಹೆಣ್ಣು ಅಲಂಕಾರ ಮಾಡಿಕೊಂಡು ಬಂದು ನಮ್ಮೆದುರಿನ ಕುರ್ಚಿಮೇಲೆ ಕುಳಿತು, ಲಜ್ಜಿತಳಾಗಿ ಕಂಪಿಸುತ್ತಾ ಪರಮೇಶಿಯನ್ನು ನೋಡಿ ಬೆಳದಿಂಗಳ ಬಾಲೆಯಂತೆ ನಕ್ಕು ತನ್ನ ಕುಡಿ ನೋಟದಿಂದ ಮೆಚ್ಚುಗೆ ಸೂಚಿಸಿದಳು. ಎಕೆ47 ಧಾಳಿಗೆ ಸಿಕ್ಕಿದಂತೆ ತತ್ತರಿಸಿದ ಪರಮೇಶಿ.

"ಏನಯ್ಯಾ ಹುಡುಗಿ ಇಷ್ಟವಾಯಿತಾ? ಏನೇನೋ ಕೇಳಿ ಅವಳನ್ನು ಪೇಚಿಗೆ ಸಿಕ್ಕಿಸುತ್ತೀನಿ ಅಂತ ಹೇಳಿದ್ಯಲ್ಲಾ ಅದೇನೂ ಕೇಳಬೇಡ!" ಅವನ ಕಿವಿ ಬಳಿ ಪಿಸುಗುಟ್ಟಿದೆ. ಅವನು ಬೆವತು, ನಾಲಿಗೆ ಒಣಗಿ, ಮಾತುಹೊರಡದೆ "ಅದು...ಅದೂ...!" ಅಂತ ಬಿಕ್ಕಳಿಸಿದಾಗ ತಿಳಿಯಿತು, ಹೆಣ್ಣಿನ ಲಜ್ಜೆ ಬ್ರಹ್ಮಾಸ್ತ್ರದಂತೆ ಮಹಾಸ್ತ್ರ. ಈಗ ಹೆಂಡತಿ ದಾಸನಾಗಿ ಮಕ್ಕಳ ಸೇವಕನಾಗಿ ಬಾಳುತ್ತಿದ್ದಾನೆ ಮೀಸೆ ಹೊತ್ತ ಗಂಡನೆಂದು ಹೇಳಿಕೊಳ್ಳುತ್ತಾ.

ಜಗತ್ತನ್ನೇ ಗೆದ್ದ ಭರತ ಚಕ್ರವರ್ತಿ ಪೌದನಪುರದ ರಾಜ, ತನ್ನ ತಮ್ಮ ಬಾಹುಬಲಿ ಜೊತೆ ಯುದ್ಧ ಮಾಡಿ, ಸೋತಾಗ ಲಜ್ಜಿತನಾಗಿ ತಲೆಬಾಗಿ ಕಣ್ಣೀರಿಟ್ಟನು ಎಂದು ಪಂಪ ಬರೆಯುತ್ತಾನೆ. ಹೀಗೆ ಅಪಮಾನಿತನಾದಾಗ ಮನುಷ್ಯ ಲಜ್ಜಿತನಾಗುತ್ತಾನೆ. ಯೆಹೂದಿ ಸೈನಿಕರಿಗೆ ಯೇಸು ಕ್ರಿಸ್ತನನ್ನು ತೋರಿಸಿಕೊಟ್ಟ ಅವನ ಆಪ್ತ ಶಿಷ್ಯರಲ್ಲೊಬ್ಬ ಹೊನ್ನಿನ ಆಸೆಗಾಗಿ. ಯೇಸು ಕ್ರಿಸ್ತನನ್ನು ಶಿಲುಬೆಗೇರಿಸಿದಾಗ ಅವನು ಆಕಾಶದತ್ತ ನೋಡಿ "ದೇವರೇ, ದೇವರೇ, ತಿಳಿಯದೆ ತಪ್ಪು ಮಾಡಿದ ಇವರನ್ನು ಕ್ಷಮಿಸು, ಎಲೀ ಎಲೀ ಲುಮ್ಮಾ ಸಬಕ್ತಾಯಿ" ಎನ್ನುತ್ತಾನೆ. ಅವನ ಮಾತುಗಳನ್ನು ಕೇಳಿದ ಅವನ ವಿದ್ರೋಹಿ ಶಿಷ್ಯ ಪಶ್ಚಾತ್ತಾಪದಿಂದ ಲಜ್ಜಿತನಾಗಿ, ಕೈಗಳಿಂದ ಮುಖ ಮುಚ್ಚಿಕೊಂಡು ಗಳಗಳನೆ ಅಳುತ್ತಾ ನೆಲದ ಮೇಲೆ ಹೊರಳಾಡಿ ಸಂಕಟಪಟ್ಟನಂತೆ. ಪಶ್ಚಾತ್ತಾಪದಿಂದಲೂ ಮನುಷ್ಯ ಲಜ್ಜಿತನಾಗುತ್ತಾನೆ.

ನಮ್ಮ ದೇಶದಲ್ಲಿ ಸಂಪ್ರದಾಯಸ್ಥರು ಒಂದು ಹೆಣ್ಣು ಬೇರೊಬ್ಬ ಗಂಡಿನೊಂದಿಗೆ ಸಹಜವಾಗಿ ನಿಷ್ಕಲ್ಮಶ ಭಾವದಿಂದ ಮಾತನಾಡಿದರೂ, "ಇವಳೊಬ್ಬಳು ಲಜ್ಜೆಗೆಟ್ಟವಳು!" ಎಂದು ದೂಷಿಸುತ್ತಿದ್ದ ಕಾಲವೊಂದಿತ್ತು. ಆದರೆ ಈಗ ಪಾಶ್ಚಾತ್ಯ ದೇಶಗಳ ಸಂಪ್ರದಾಯಗಳಿಂದ ಪ್ರಭಾವಿತರಾದ ನಮ್ಮ ಯುವ ಜನಾಂಗ, ತೀರ ಲಜ್ಜಿತಳಾಗಿ ವರ್ತಿಸುವ ಹೆಣ್ಣನ್ನು ನೋಡಿದರೆ, 'ಅನ್‌ಪಡ್' 'ಹಳ್ಳಿಮುಕ್ಕ' 'ಕನ್ಸರ್‌ವೇಟೀವ್' ಎಂದು ಹೀಯಾಳಿಸುತ್ತಾರೆ. ಲಜ್ಜೆಯಮೌಲ್ಯ. ಕಾಲ, ದೇಶ, ಸಂಪ್ರದಾಯಗಳಿಗೆ ಬದ್ಧವಾಗಿದೆ ಎಂದಾಯಿತು.

"All is fair in love and war" ಎಂಬ ಮಾತಿದೆ. ಇಲ್ಲಿ ಲಜ್ಜೆ ಗೌಣ. ಪ್ರೇಮದಲ್ಲಿ, ಯುದ್ಧದಲ್ಲಿ ಲಜ್ಜೆಗೆ ಅವಕಾಶ ಕೊಟ್ಟರೆ ಪರಿಣಾಮ ಹೇಳಲಾಗದು, ವಿಪರೀತ ಲಜ್ಜೆ ಮನುಷ್ಯನ ಜೀವನವನ್ನೇ ಬದಲಾಯಿಸಬಹುದು.

★★★

ನಾನು ಆಗ ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ಓದುತ್ತಿದ್ದ ಕಾಲ. ಆಗ ಕಾಲೇಜಿನಲ್ಲಿ ಕೋ ಎಜ್ಯುಕೇಷನ್ ಇತ್ತು. ಬಿ.ಎ. ಅಂತಿಮವರ್ಷ ತರಗತಿಯಲ್ಲಿ ಓದುತ್ತಿದ್ದೆವು. ಕ್ಲಾಸ್ ರೂಂನಲ್ಲಿ ಮೊದಲನೆಯ ಬೆಂಚಿನಲ್ಲಿ ನಾವು ಐವರು ಗೆಳೆಯರು ಕುಳಿತುಕೊಳ್ಳುತ್ತಿದ್ದವು ನಾವು ಓದುವುದರಲ್ಲಿ ಮುಂದು, ಆಟದಲ್ಲಿ ಮುಂದು, ಸಾಹಿತ್ಯ ಚಟುವಟಿಕೆಗಳಲ್ಲಿ ಮುಂದು ಹೀಗಾಗಿ ಕಾಲೇಜಿನಲ್ಲಿ ನಮಗೆ 'ಫೇಮಸ್ ಫೈವ್' (Famous Five) ಅಂತ ಹೆಸರಿಟ್ಟಿದ್ದರು. ನಮ್ಮ ಲೀಡರ್ ವಿಕ್ರಂ. ಅವನ ತಂದೆ ದೊಡ್ಡ ಕಂಪೆನಿಯೊಂದರ ಮ್ಯಾನೇಜಿಂಗ್ ಡೈರೆಕ್ಟರ್. ಇವನು ಒಬ್ಬನೇ ಮಗ. ಎತ್ತರವಾದ ಮೈಕಟ್ಟು, ಹೊಂಬಣ್ಣದ ಮೈ. ತುಂಬ ಸುಂದರವಾಗಿದ್ದ ನೋಡಲು 'ಗ್ರೆಗರಿಪೆಕ್' ನಂತೆ ಇದ್ದ. ಅವನನ್ನು ನಾವು ಕರೆಯುತ್ತಿದ್ದುದೇ ಹಾಗೆ. ದೇವಾನಂದ್ ನಟಿಸಿದ ಚಲನಚಿತ್ರಗಳೆಂದರೆ ಅವನಿಗೆ ಪಂಚಪ್ರಾಣ. ಅವನ ಉಪಯೋಗಕ್ಕೆಂದೇ ಅಂಬಾಸಿಡರ್ ಕಾರೊಂದಿತ್ತು. ಅವನ ಪರ್ಸಿನಲ್ಲಿ ಯಾವಾಗಲೂ ನೂರರ ನೋಟುಗಳು ತುಂಬಿರುತ್ತಿದ್ದವು. ಕೆಂಪೇಗೌಡ ರಸ್ತೆಯ ಥಿಯೇಟರುಗಳಲ್ಲಿ ಹೊಸ ಹಿಂದಿ ಪಿಕ್ಚರ್ ಬಿಡುಗಡೆಯಾದರೆ ನಾವು ಫೇಮಸ್ ಫೈವ್ ತಪ್ಪದೆ ಹೋಗುತ್ತಿದ್ದೆವು. ಖರ್ಚೆಲ್ಲಾ ಅವನದೇ. ಸಾಹಿತ್ಯ ಓದುವುದರಲ್ಲಿ, ನಾಟಕ, ಪಿಕ್ಚರ್ ನೋಡುವುದರಲ್ಲಿ ಅವನಿಗೆ ಒಳ್ಳೆಯ ಟೇಸ್ಟ್ ಇತ್ತು.

ನಮ್ಮ ಹಿಂದಿನ ಬೆಂಚಿನಲ್ಲಿ ಐದು ಜನ ವಿದ್ಯಾರ್ಥಿನಿಯರು ಕುಳಿತುಕೊಳ್ಳುತ್ತಿದ್ದರು. ಅವರೂ ಸಹ ಆಟ, ಪಾಠ, ಕಲೆಗಳಲ್ಲಿ ಪ್ರತಿಭಾವಂತರು. ಆ ಬೆಂಚಿನ ಲೀಡರ್ 'ಲತಾ'. ರೂಲಿಂಗ್ ಗೌರ್ನಮೆಂಟಿನ ಉಪಸಚಿವರ ಒಬ್ಬಳೇ ಮಗಳು. ಎತ್ತರವಾದ ದೇಹ, ಸಣ್ಣನೆಯ ಸೊಂಟ, ತುಂಬಿದ ಕುಚದ್ವಯಗಳು, ನೀಳವಾದ ಕೇಶರಾಶಿ, ಕೆಂಪು ತಾವರೆಯ ಮೈಬಣ್ಣ, ನೀಳವಾದ ಮೂಗು, ದಪ್ಪನೆಯ ತುಟಿಗಳು, ಅಗಲವಾದ ಕಣ್ಣುಗಳು, ನಕ್ಕರೆ ನಕ್ಷತ್ರಗಳ ಸಾಲಿನಂತಹ ಹಲ್ಲುಗಳು. ಈ ಅಪ್ಸರಗೆ ತುಂಬ ಧೈರ್ಯ, ಗಂಡೆದೆ. ಹಣವನ್ನು ನೀರಿನಂತೆ ಖರ್ಚು ಮಾಡುತ್ತಿದ್ದಳು. ಇವಳ ಉಪಯೋಗಕ್ಕೆ ಕೆಂಬಣ್ಣದ ಸ್ಪೋರ್ಟ್ಸ್ ಕಾರೊಂದಿತ್ತು. ಅವಳು ನೋಡುತ್ತಿದ್ದುದು ಬರೀ ಇಂಗ್ಲೀಷ್ ಚಿತ್ರಗಳು. ಎಂಜಿರಸ್ತೆ, ಬ್ರಿಗೇಡ್ ರಸ್ತೆಗಳ ಥಿಯೇಟರುಗಳ ಬಳಿ ಅವಳನ್ನು ನೋಡಬಹುದಿತ್ತು. ಅವಳಿಗೆ 'ಎಲಿಜಬತ್‌ಟೇಲರ್' ಎಂದು ಕಾಲೇಜಿನಲ್ಲಿ ಹೆಸರಿಟ್ಟಿದ್ದರು.

ವಿಕ್ರಂಗೂ ಲತಾಳಿಗೂ ಯಾವಾಗಲೂ ಎಲ್ಲದರಲ್ಲೂ ಪೈಪೋಟಿ. ನಾವು ಆ ಬೆಂಚಿನ ಹುಡುಗಿಯರ ಗುಂಪಿಗೆ "Female Five" ಫೀಮೇಲ್ ಫೈವ್ ಅಂತ ಹೆಸರಿಟ್ಟಿದ್ದೆವು.

ನಮ್ಮ ಮೇಲೆ ಚುಟುಕಗಳನ್ನು ಬರೆದು ವ್ಯಂಗ್ಯಚಿತ್ರಗಳನ್ನು ಬರೆದು, ಚೀಟಿಗಳನ್ನು ನಮ್ಮ ಮೇಲೆ ಎಸೆಯುತ್ತಿದ್ದರು. ಪ್ರತಿಯಾಗಿ ನಾವು ಕ್ಲಾಸಿನ ಬೋರ್ಡಿನ ಮೇಲೆ ಅವರನ್ನು ಅಪಮಾನಗೊಳಿಸುವ ಹಾಗೆ ಬರೆಯುತ್ತಿದ್ದೆವು. 'ಬೆಪ್ಪಮುಂಡೇವು' ಅಂತ ಅವರು ಚೀಟಿ ಬರೆದರೆ 'ದಪ್ಪಮುಂಡೇವು' ಅಂತ ನಾವು ಬರೆಯುತ್ತಿದ್ದೆವು.

ರಾಜ್ಯಮಟ್ಟದಲ್ಲಿ ಕ್ರಿಕೆಟ್ ಸ್ಪರ್ಧೆಯನ್ನು ಹೆಸರಾಂತ ಸಂಸ್ಥೆಯೊಂದು ನ್ಯಾಷನಲ್ ಕಾಲೇಜು ಮೈದಾನದಲ್ಲಿ ಏರ್ಪಡಿಸಿತ್ತು. ಹದಿನೈದು ದಿನಗಳ ಕಾಲ ಸ್ಪರ್ಧೆ ನಡೆಯಲಿತ್ತು. ನಮ್ಮ ಕಾಲೇಜು ತಂಡವು ಭಾಗವಹಿಸಿತ್ತು. 'ವಿಕ್ರಂ' ತಂಡದ ನಾಯಕ. ಮೂರು ರೌಂಡ್‌ಗಳಲ್ಲಿ ಗೆದ್ದು ಫೈನಲ್ ತಲುಪಿದ್ದೆವು. ಪ್ರಶಸ್ತಿಯೊಂದಿಗೆ ಇಪ್ಪತ್ತು ಸಹಸ್ರ ರೂಪಾಯಿ ಗೆದ್ದವರಿಗೆ ಕೊಡಲಾಗುತ್ತಿತ್ತು. ಮ್ಯಾಚ್ ನಡೆಯುವ ದಿನ ಮೈದಾನದ ಬಳಿ ಪೋಸ್ಟರ್‌ಗಳನ್ನು ಅಂಟಿಸಲಾಗಿತ್ತು. ಅದರಲ್ಲಿ ವಿಕ್ರಂ ಬ್ಯಾಟ್ ಹಿಡಿದು ನಿಂತಿದ್ದಾನೆ ಅದರ ಕೆಳಗಡೆ 'ಜೀರೋಹೀರೋ' ಎಂದು ಬರೆಯಲಾಗಿತ್ತು. ಮ್ಯಾಚ್ ನೋಡಲು ಲತಾ ಅವಳ ಗೆಳತಿಯರೊಡನೆ ಬಂದಿದ್ದಳು. ನಮ್ಮ ಪ್ರತಿಸ್ಪರ್ಧಿ ತಂಡದವರು ಮೊದಲು ಬ್ಯಾಟ್ ಮಾಡಿದರು. ಅವರು ಒಂದೊಂದು ರನ್ ಮಾಡಿದಾಗಲೂ ಲತಾ ಮತ್ತು ಅವಳ ತಂಡ ಚಪ್ಪಾಳೆ ತಟ್ಟುವುದು ಕೂಗುವುದು 'ಕೀಪ್ ಇಟ್ ಅಪ್' ಎಂದು ಪ್ರೋತ್ಸಾಹಿಸುವುದು ಮಾಡುತ್ತಿದ್ದರು. ನಮ್ಮ ಬ್ಯಾಟಿಂಗ್ ಸರದಿ ಬಂತು, ನಮ್ಮ ಕಡೆ ಒಬ್ಬೊಬ್ಬರು ಔಟಾದಾಗಲೂ ಸಿಹಿ ಹಂಚಿದರು. ನಾನು ಮತ್ತು ವಿಕ್ರಂ ಬ್ಯಾಟಿಂಗ್ ಮಾಡಲು ಬಂದಾಗ ''ವಿ ವಾಂಟ್ ಡಬಲ್ ಡಕ್'' ಎಂದು ಕೂಗಿದರು. ''ಷೇಮ್ ಷೇಮ್ ಜೀರೋ ಹೀರೋ'' ಎಂದು ಅರಚಿದರು. ವಿಕ್ರಂ ಆವೇಶ ಬಂದವನಂತೆ ಆಡಿ ಸೆಂಚುರಿ ದಾಟಿದ. ನಮ್ಮ ತಂಡ ಗೆದ್ದು ಪ್ರಶಸ್ತಿ ಪಡೆಯಿತು. ಲತಾ ಮತ್ತು ಅವಳ ತಂಡ ಮಾಯವಾಗಿದ್ದರು.

ಇದಾದ ಮೂರು ತಿಂಗಳ ನಂತರ, ಟೌನ್‌ಹಾಲ್‌ನಲ್ಲಿ ಸೌಂದರ್ಯ ಸ್ಪರ್ಧೆಯಿತ್ತು. ಪ್ರಸಿದ್ಧ ಸೌಂದರ್ಯ ಸಾಧನ ತಯಾರಿಸುವ ಕಂಪೆನಿಯವರು ಏರ್ಪಡಿಸಿದ್ದರು. ಲತಾ ಭಾಗವಹಿಸಿದ್ದಳು. ಅವಳು ಅಂತಿಮ ರೌಂಡ್ ತಲುಪಿದ್ದಳು. ನಾವು ಫೇಮಸ್ ಫೈವ್ ತಂಡದವರು ಟೌನ್‌ಹಾಲ್ ಸುತ್ತಮುತ್ತ ಭಿತ್ತಿ ಪತ್ರಗಳನ್ನು ಅಂಟಿಸಿದೆವು. ಅದರಲ್ಲಿ ಕತ್ತೆಯೊಂದಕ್ಕೆ ಸೀರೆ ಉಡಿಸಿ, ಕಿರೀಟವಿಟ್ಟು 'ಮಿಸ್ ಗಾರ್ದಭ ಸುಂದರಿ' ಎಂದು ಬರೆದಿದ್ದೆವು. ಸ್ಪರ್ಧೆಗೆ ಆಗಮಿಸಿದ ಲತಾ ತನ್ನ ಸ್ಪೋರ್ಟ್ಸ್ ಕಾರಿನಿಂದ ತನ್ನ ಗೆಳತಿಯರೊಡನೆ ಇಳಿದಾಗ ನಾವು 'ಗಾರ್ದಭ ಸುಂದರಿಗೆ ಜಯವಾಗಲಿ!' ಎಂದು ಘೋಷಿಸಿದೆವು.

'ಲತಾ' ನಮ್ಮ ಕಡೆ ಕೆಂಗಣ್ಣುಬೀರುತ್ತಾ ತನ್ನ ಗೆಳತಿಯರೊಡನೆ ಸರಸರನೆ ಹೋದಳು.

'ವಿಕ್ರಂ' ನಮಗೆಲ್ಲಾ ಟಿಕೇಟು ತೆಗೆದಿದ್ದ. ನಾವು ಪ್ರೇಕ್ಷಕರ ಗ್ಯಾಲರಿ ಕಡೆ ಹೊರಟೆವು. ಸೌಂದರ್ಯ ಸ್ಪರ್ಧೆಯಲ್ಲಿ ತೀವ್ರ ಸ್ಪರ್ಧೆಯಿದ್ದು ನಾವು ಉಸಿರು ಬಿಗಿಹಿಡಿದು ಕುಳಿತೆವು. ಕೊನೆಗೆ 'ಲತಾ' ಸೌಂದರ್ಯ ರಾಣಿಯೆಂದು ಘೋಷಿಸಿದಾಗ, ನಾವು ಚಪ್ಪಾಳೆ ತಟ್ಟಿ ಸ್ವಾಗತಿಸಿದೆವು. ಅದು ಅವಳಿಗೆ ತಿಳಿಯಲಿಲ್ಲ.

ಫಸ್ಟ್‌ಟರ್ಮ್ ಪರೀಕ್ಷೆಗಳು ಮುಗಿದು ರಜೆ ಬಂದಿತ್ತು. ನವರಾತ್ರಿಯ ವಿಜಯದಶಮಿಯ ದಿನ, ಕೋಟೆ ಹೈಸ್ಕೂಲಿನ ಮೈದಾನದಲ್ಲಿ ದೊಡ್ಡ ಪೆಂಡಾಲ್ ಹಾಕಿಸಿ, ಲತಾಳ ಪ್ರಥಮ ಸಂಗೀತ ಕಛೇರಿ ಏರ್ಪಡಿಸಿದ್ದರು ಅವಳ ತಂದೆ. ಸಮಾರಂಭಕ್ಕೆ ಊರಿನ ಪ್ರಮುಖರು, ಸಂಗೀತ ವಿದ್ವಾಂಸರು, ರಾಜಕಾರಣಿಗಳು, ಕೆಲವು ಸಚಿವರು ಆಗಮಿಸಿದ್ದರು. ಪತ್ರಿಕೆಯವರು, ರೇಡಿಯೋ ನಿಲಯದವರು ಕಾದು ಕುಳಿತಿದ್ದರು. ಆ ಸಂದರ್ಭವನ್ನು ರಾಜಕೀಯವಾಗಿ ಸೇಡು ತೀರಿಸಿಕೊಳ್ಳಲು ಉಪಯೋಗಿಸಿಕೊಂಡು, ಲತಾಳ ತಂದೆಯ ರಾಜಕೀಯ ವಿರೋಧಿಗಳು ಕಛೇರಿಗೆ ಬರಬೇಕಾಗಿದ್ದ ಮೃದಂಗ ವಿದ್ವಾನನ್ನು ಅಪಹರಿಸಿದ್ದರು. ಎಲ್ಲಾ ವಾದ್ಯದವರು ಬಂದರೂ ಮೃದಂಗ ವಿದ್ವಾನ್ ಬರಲಿಲ್ಲ. 'ಲತಾ' ಮತ್ತು ಅವಳ ತಂದೆ ಗಾಬರಿಯಿಂದ ಪರಿತಪಿಸುತ್ತಿದ್ದರು. ನಮ್ಮ ಮುಂದಿನ ಸಾಲಿನಲ್ಲಿ ಕುಳಿತಿದ್ದ ವಿರೋಧ ಪಕ್ಷದವರು ಕಿಸಕಿಸನೆ ನಗುತ್ತಾ ತಮಾಷೆ ನೋಡುತ್ತಿದ್ದರು. ಅವರ ಮಾತುಗಳಿಂದ ನಮಗೆ ವಿಷಯ ತಿಳಿಯಿತು. 'ವಿಕ್ರಂ' ಎದ್ದು ಸರಸರನೆ ಹೊರಟ. ನಾವು ದಿಕ್ಕು ತೋಚದೆ ಅಲ್ಲೇ ಕುಳಿತಿದ್ದೆವು. ಸರಿಯಾದ ವೇಳೆಗೆ ಕಛೇರಿ ಪ್ರಾರಂಭವಾಯಿತು. 'ವಿಕ್ರಂ' ಮೃದಂಗ ನುಡಿಸುತ್ತಿದ್ದ. ಕಾರ್ಯಕ್ರಮ ಯಶಸ್ವಿಯಾಯಿತು. ಮಾರನೆಯ ದಿನ ಪತ್ರಿಕೆಗಳಲ್ಲಿ 'ಲತಾ'ಳ ಫೋಟೋ ಹಾಕಿ ಪ್ರಶಂಶಿಸಿ ಬರೆದಿದ್ದರು. 'ವಿಕ್ರಂ' ಚಿಕ್ಕ ವಯಸ್ಸಿನಲ್ಲೇ ಘಟಂ ಮಂಜುನಾಥ್‌ರವರ ಬಳಿ ಮೃದಂಗ ಕಲಿತಿದ್ದ ವಿಷಯ ನಂತರ ತಿಳಿಯಿತು. ಈ ಪ್ರಕರಣವಾದ ಮೇಲೆ ವಿಕ್ರಂ ಮತ್ತು ಲತಾ ಇವರಿಬ್ಬರ ನಡವಳಿಕೆಗಳಲ್ಲಿ ವ್ಯತ್ಯಾಸ, ಏನೋ ಬದಲಾವಣೆ ಕಾಣತೊಡಗಿತು. 'ಟ್ಯಾಲೆಂಟ್ಸ್‌ಡೇ' ದಿನ ವಿಕ್ರಂ ದೇವಾನಂದ್‌ನ ಹಂದೋನೋ ಚಿತ್ರದ 'ಕಬೀನಾ ಜಾವೋ ಛೋಡ್‌ಕರ್-ಕಭೀ-ಕಭೀ' ಹಾಡನ್ನು ಹಾಡಿದಾಗ 'ಲತಾ' 'ಒನ್ಸ್‌ಮೋರ್' ಎಂದು ಕೂಗಿ ಚಪ್ಪಾಳೆ ತಟ್ಟಿದಳು.

ಅಂತರ ಕಾಲೇಜು ಸ್ಪರ್ಧೆಯೊಂದರಲ್ಲಿ ಭಾಗವಹಿಸಿದ ಲತಾ 'ಸ್ತ್ರೀಗೆ ಸ್ವಾತಂತ್ರ ಬೇಕೇಬೇಕು' ಎಂಬ ವಾದವನ್ನು ಮಂಡಿಸಿ ಮಾತನಾಡಿದಾಗ ವಿಕ್ರಂ 'ವೆಲ್‌ಸೆಡ್' 'ಇಟ್ ಈಸ್ ಎ ಪಾಯಿಂಟ್' ಎಂದು ಕೂಗಿ ಹುರಿದುಂಬಿಸಿದ.

ನಮ್ಮ ಬೆಂಚಿನವರು ಮತ್ತು ಲತಾಳ ಬೆಂಚಿನವರು ಕಕ್ಕಾಬಿಕ್ಕಿಯಾಗಿದ್ದೆವು. ಯಾರನ್ನು ಬೆಂಬಲಿಸಬೇಕು, ಯಾರನ್ನು ವಿರೋಧಿಸಬೇಕು ತಿಳಿಯದೆ ಪೇಚಾಡಿದೆವು.

ಫೈನಲ್ ಪರೀಕ್ಷೆಗಳು ಮುಗಿದವು. ಲತಾಳ ತಂದೆ ಅವಳ ಮದುವೆ ನಿಶ್ಚಯ ಮಾಡಿದರು. ವರ ತುಂಬ ಓದಿದವನು. ವಿದೇಶಗಳಲ್ಲಿ ಓದಿ ಹಲವಾರು ಡಿಗ್ರಿಗಳನ್ನು ಪಡೆದು ಸ್ವದೇಶಕ್ಕೆ ಬಂದಿದ್ದ. ಅವನ ತಂದೆ ಭಾರಿ ಶ್ರೀಮಂತರು ಮಂಡ್ಯದ ಬಳಿ ಐವತ್ತು ಎಕರೆ ಜಮೀನಿತ್ತು. ಜೊತೆಗೆ ಕ್ಯಾಬಿನೆಟ್ ಮಿನಿಸ್ಟರಾಗಿದ್ದರು.

ಈ ವಿಷಯ ತಿಳಿದ ಮೇಲೆ ವಿಕ್ರಂ ಗಡ್ಡ ಬೆಳೆಸಿದ, ಊಟ ತಿಂಡಿ ಬಿಟ್ಟ, ನಮ್ಮ ಜೊತೆ ಓಡಾಡುವುದನ್ನು ನಿಲ್ಲಿಸಿದ. 'ಯಾಕೋ ಏನಾಯಿತೋ ನಿನಗೆ!' ಎಂದು ವಿಚಾರಿಸಿದರೆ ಮೌನವಾಗಿರುತ್ತಿದ್ದ. 'ಲತಾ' ಸಹ ಮಂಕಾದಳು. ಯಾವಾಗಲೂ ಏನನ್ನೋ ಯೋಚಿಸುತ್ತಿದ್ದಳು. ಸರಿಯಾಗಿ ಊಟ-ನಿದ್ರೆ ಮಾಡುತ್ತಿರಲಿಲ್ಲ. 'ಇವಳಿಗೆ ಮದುವೆ ಹುಚ್ಚು ಹಿಡಿದಿದೆ!' ಎಂದು ಅವಳ ಗೆಳತಿಯರು ತಮಾಷೆ ಮಾಡುತ್ತಿದ್ದರು.

ವಿಕ್ರಂ, ಮದುವೆಯ ದಿನ ಬೆಳಿಗ್ಗೆ ನಮ್ಮ ಮನೆಗೆ ಬಂದು, ನನ್ನನ್ನು ಹೋಟೆಲಿಗೆ ಕರಕೊಂಡು ಹೋಗಿ ತಿಂಡಿ ಕೊಡಿಸಿ, ನನ್ನ ಕೈಗೆ ಒಂದು ಪತ್ರ ಕೊಟ್ಟ ''ಇದನ್ನ ಜೋಪಾನವಾಗಿ ಹೇಗಾದರೂ ಲತಾಳ ಕೈಗೆ ತಲುಪಿಸು. ನಾನು ಅವಳಿಗಾಗಿ ಏರೋಡ್ರಂನಲ್ಲಿ ಕಾಯ್ತಾ ಇರ್ತೇನೆ'' ಎಂದ.

''ಏನೋ ಇದೆಲ್ಲಾ?'' ಎಂದು ನಾನು ಕೇಳಿದೆ.

''ಐ ಲವ್ ಲತಾ, ಅವಳಿಲ್ಲದೆ ನಾನು ಬದುಕಲಾರೆ'' ಎಂದ.

''ಇಷ್ಟು ದಿನ ಯಾಕೋ ಹೇಳಲಿಲ್ಲ?'' ಎಂದು ಕೇಳಿದೆ.

''ಈ ಮಾತು ಹೇಳಲು ಲಜ್ಜೆ ಅಡ್ಡಬಂತು!'' ಎಂದ.

ಆತುರಾತುರವಾಗಿ ನಾನು ಲತಾ ಮದುವೆ ಮನೆ ಕಡೆ ಹೊರಟೆ.

ಲತಾ ಅವಳ ಗೆಳತಿ ಗಾಯಿತ್ರಿ ಮತ್ತು ಜ್ಯೋತಿಯರನ್ನು ಹತ್ತಿರ ಕರೆದು ಒಂದು ಪತ್ರವನ್ನು ಅವರ ಕೈಗೆ ಕೊಟ್ಟು ''ಹೇಗಾದರೂ ಈ ಪತ್ರವನ್ನು ವಿಕ್ರಂಗೆ ತಲುಪಿಸಿ, ಮುಹೂರ್ತಕ್ಕೆ ಮುಂಚೆ ಬಂದು ನನ್ನನ್ನು ಕರೆದುಕೊಂಡು ಹೋಗಲು ಹೇಳಿ'' ಎಂದಳು.

''ಇದೇನೇ ಇವೆಲ್ಲಾ?'' ಎಂದು ಜ್ಯೋತಿ ಕೇಳಿದಳು.

''ಐಲವ್ ವಿಕ್ರಂ - ಅವನಿಲ್ಲದ ನನ್ನ ಬಾಳು ಶೂನ್ಯ'' ಎಂದಳು ಲತಾ.

''ಮತ್ತೇ ಇಷ್ಟು ದಿನ ಯಾಕೆ ನಮಗೆ ಹೇಳಲಿಲ್ಲ?'' ಆತುರವಾಗಿ ಕೇಳಿದಳು ಗಾಯಿತ್ರಿ. ''ಏನೋ ಲಜ್ಜೆ ಏನೋ ಸಂಕೋಚ ನನ್ನನ್ನ ಕಾಡಿಸಿತು'' ಎಂದಳು ಲತಾ.

ನಾನು ಮದುವೆ ಮಂಟಪವನ್ನು ತಲುಪಿದಾಗ, ಸೆಕ್ಯೂರಿಟಿಯವರು ಆಹ್ವಾನ ಪತ್ರಿಕೆಯಿಲ್ಲದೆ ಒಳಗೆ ಬಿಡಲಿಲ್ಲ. ಬ್ಲಾಕ್ ಕಮ್ಯಾಂಡೋಸ್, ಗನ್‌ಮೆನ್‌ಗಳು ಓಡಾಡುತ್ತಿದ್ದರು. ಜ್ಯೋತಿ ಮತ್ತು ಗಾಯಿತ್ರಿ ನನ್ನನ್ನ ನೋಡಿ, ನನ್ನ ಬಳಿಗೆ ಬಂದು ''ವಿಕ್ರಂ ಈಗ ಎಲ್ಲಿದ್ದಾರೆ? ತುರ್ತಾಗಿ ನೋಡಬೇಕು!'' ಎಂದರು. ನಾನು ಅವರನ್ನು ದೂರ ಕರೆದುಕೊಂಡು ಹೋಗಿ ವಿಕ್ರಂ ನನ್ನನ್ನು ಕಳುಹಿಸಿದ ವಿಷಯ ತಿಳಿಸಿದೆ. ಅವರು ಲತಾಳ ಸಂದೇಶ ತಿಳಿಸಿದರು. ಮೂವರೂ ಸೇರಿ ಲತಾಳನ್ನು ಹೊರಗೆ ಕರೆದೊಯ್ಯುವ ಪ್ಲಾನ್ ಮಾಡಿಕೊಂಡು, ಮದುವೆ ಮಂಟಪಕ್ಕೆ ಹೋದೆವು. ಕಾಲ ಮಿಂಚಿಹೋಗಿತ್ತು. ಲತಾಳ ಮದುವೆ ನಡೆದುಹೋಯಿತು.

'ಷಿಟ್!' ಎಂದು ಅರಚಿದೆ.

''ಇದೆಲ್ಲಾ ವಿಕ್ರಂದೇ ತಪ್ಪು! ಮೊದಲೇ ಯಾಕೆ ಲವ್ ವಿಷಯ ಹೇಳಲಿಲ್ಲ?'' ಎಂದಳು ಗಾಯಿತ್ರಿ.

''ಸಾಕು ಸುಮ್ನಿರೇ! ಲತಾಳೇನು ಮಹಾ! ಅವಳು ಲವ್ ಮಾಡುವ ವಿಷಯ ನಮ್ಮ ಹತ್ರಾನೂ ಹೇಳ್ಲಿಲ್ಲ'' ಎಂದಳು ಜ್ಯೋತಿ.

''ಇಬ್ಬರೂ ತಪ್ಪಿಲ್ಲ!'' ಎಂದೆ ನಾನು ಗಂಭೀರವಾಗಿ.

''ಮತ್ತೇ!?'' ಎಂದರು ಅವರಿಬ್ಬರೂ ಆಶ್ಚರ್ಯದಿಂದ.

''ನಿಜವಾದ ತಪ್ಪಿತಸ್ಥ ಲಜ್ಜೆ ಎಂಬ ನಾಚಿಕೆ. ನಾಚಿಕೆ ಬಿಟ್ಟು ಇವರಿಬ್ಬರೂ ಮೊದಲೇ ಮಾತಾಡಿದ್ದರೆ....!'' ಎಂದೆ ನಾನು. ಅವರಿಬ್ಬರೂ ಮೌನವಾಗಿದ್ದರು.

''ಶ್ರೀ ಕೃಷ್ಣನಿಗೆ ಪ್ರೇಮಪತ್ರ ಬರೆದ ರುಕ್ಮಿಣಿಗೆ ಇಲ್ಲದಿದ್ದ ಲಜ್ಜೆ, ನಳನಿಗೆ ಹಂಸಗಳ ಮೂಲಕ ಸಂದೇಶ ಕಳಿಸಿದ ದಮಯಂತಿಗೆ ಇಲ್ಲದಿದ್ದ ಲಜ್ಜೆ, ಈ ಪ್ರೇಮಿಗಳನ್ನು ಯಾಕೆ ಕಾಡಿಸಿತು?'' ಪ್ರಶ್ನಿಸಿದೆ.

ಲಜ್ಜೆ ಅತಿಯಾದಾಗ ಮಾನವನ ಬಾಳು ಹೀಗಾಗುತ್ತದೆ.

ಈಗ ಲತಾ ಗೃಹಿಣಿ, ಐದು ಮಕ್ಕಳ ತಾಯಿ, ಜೀವನದಲ್ಲಿ ಉತ್ಸಾಹವಿಲ್ಲದೆ ಯಾಂತ್ರಿಕ ಜೀವನ ನಡೆಸಿದ್ದಾಳೆ. ವಿಕ್ರಂ ಮಿಲಿಟರಿ ಸೇರಿ ಮೇಜರ್ ಆಗಿದ್ದಾನೆ. ಕಾಶ್ಮೀರದ ಗಡಿಯಲ್ಲಿದ್ದಾನೆ.

ಕಾಲೇಜಿನ ರಂಜನೀಯ ಜೀವನ ಮತ್ತೊಮ್ಮೆ ಇಡೀ ಜೀವಮಾನದಲ್ಲಿ ದೊರಕದು.

ಯಾಕೋ ಲೇಟಾಗೋಯ್ತು

– ಎಂ.ಎಸ್.ಕೆ.

"ಯಾಕಪ್ಪ ಬರೋದು ಇಷ್ಟು ಲೇಟು?" ಅಂದರೆ "ಏನೋ ಸ್ವಲ್ಪ ಲೇಟಾಗೋಯ್ತು" ಅಂದನಂತೆ. ಋಷೀ ಮೂಲ, ನದೀಮೂಲ, ಸ್ತ್ರೀ ಮೂಲಾನ ಹೇಗೆ ಹುಡುಕಕ್ಕೆ ಹೋಗಬಾರ್ದೋ ಹಾಗೇ ಈ ಲೇಟಾಗಿ ಬರೋರ ಕಾರಣಗಳನ್ನು ಕೇಳೋಕ್ಕೆ ಹೋಗಬಾರ್ದು. ಅಪ್ಪೀ ತಪ್ಪೀ ಕೇಳಿಬಿಟ್ರೇ ಅಂದ್ರೆ ನದೀ ನೀರು ಹರಿಯೋ ಹಾಗೆ ಬರುತ್ತೆ ಕಾರಣಗಳ ಪ್ರವಾಹ; ಎದ್ದಿದ್ದೇ ಲೇಟು; ಮನೆ ಬಿಟ್ಟಿದ್ದೇ ಲೇಟು; ರಸ್ತೇಲಿ ಟ್ರಾಫಿಕ್ ಜಾಂ; ಸ್ಕೂಟರ್ ಕೈಕೊಡ್ತು; ರಸ್ತೇಲಿ ಹಳೇ ಸ್ನೇಹಿತ ಸಿಕ್ಕಿದ್ದ ಅವನ ಹತ್ತಿರ ಎರಡು ಮಾತಾಡೋದ್ರಲ್ಲಿ ಟೈಂ ಹೋಗಿದ್ದೇ ಗೊತ್ತಾಗ್ಲಿಲ್ಲ; ಮನೇಲಿ ಅಲಾರಂ ಗಡಿಯಾರ ಕೈಕೊಡ್ತು; ಲೈಟ್‌ಬಿಲ್ ಕಟ್ಟೋಕ್ಕೆ ಹೋಗಿದ್ದೆ ಅಲ್ಲಿ ತುಂಬಾ ಕ್ಯೂ ಇತ್ತು: ಒಂದೇ ಎರಡೇ ಈ ಕಾರಣಗಳ ಪ್ರವಾಹ. ಮೆಟ್ಟೂರಿಗೆ ನೀರ್ ಬಿಟ್ಟೂ ಬಿಟ್ಟೂ ಕಾವೇರಿ ಖಾಲೀ ಆಗ್ಬೋದು, ಆದರೆ ನಮ್ಮ ಲೇಟ್ ಬರೋರ ಕಾರಣಗಳ ಲಿಸ್ಟ್ ಮಾತ್ರ ಖಾಲಿ ಆಗಲ್ಲ. ಅದೊಂದು ಅಕ್ಷಯ ಪಾತ್ರೆ.

ಲೇಟಾಗಿ ಆಫೀಸ್‌ಗೆ ಬರೋರ್ನ ಇನ್ನು ಮುಂದೆ ಮ್ಯಾನೇಜರ್ ಕಾರಣ ಕೇಳೋಕ್ ಬದಲು ಅವರು ಈವರೆವಿಗೆ ಕೊಟ್ಟ ಕಾರಣಗಳ ಒಂದು ಲಿಸ್ಟ್ ಮಾಡ್ಕೊಂಡು "ಮಿ. ಇವರೆ, ಇವತ್ತು ಲೇಟಾಗಿ ಬರೋದಿಕ್ಕೆ ಎಷ್ಟನೇ ನಂಬರ್ ಕಾರಣ ಬೇಗ ಹೇಳಿಬಿಡಿ. ನಾನು ನೋಟ್ ಮಾಡ್ಕೊಂಡು ಬಿಡ್ತೀನಿ." ಅಂಥ ಕೇಳಿ ಹೇಳಿದ ಕಾರಣಕ್ಕೆ ಟಿಕ್ ಮಾರ್ಕ್ ಹಾಕಿ ಒಂದು ಗುಟುಕು ನೀರ್ ಕುಡಿದು "ಒಳ್ಳೇದು. ಹಾಗೇ ನೀವು ನಾಳೆ ಲೇಟಾಗಿ ಬರೋದಕ್ಕೂ ಈಗ್ಲೇ ಕಾರಣ ಕೊಟ್ಟುಬಿಡಿ. ಯಾಕೇಂದ್ರೆ, ನಾನು ನಾಳೆ ಲೀವ್ ಮೇಲೆ ಹೋಗೋದಿದೆ ಆಯಿತು. ಈಗ ನೀವು ರಿಜಿಸ್ಟರ್‌ಗೆ ಸೈನ್ ಹಾಕಿ ಕೆಲಸದ ಮೇಲೆ ಹೋಗಿ" ಅಂತ ಹೇಳಿ ನಾಳೆ ಕಾರಣಾನೂ ಟಿಕ್ ಮಾಡ್ಕೊಂಡುಬಿಟ್ರೆ ಎಷ್ಟೋ ಟೈಂ ಸೇವ್ ಆಗುತ್ತೆ. ಹೇಳೋನ್ಗೂ ಬಾಯಿ ಒಣಗಲ್ಲ, ಕೇಳೋನ್ಗೂ ತಲೆ ಬಿಸಿಯಾಗಲ್ಲಾ.

ಈಗೀಗ ಆಫೀಸ್ಗೆ, ಫ್ಯಾಕ್ಟರೀಗೆ, ಮದುವೆ ರಿಸೆಪ್ಷನ್ಗೆ, ಮೀಟಿಂಗಿಗೆ ಸರಿಯಾದ ಟೈಂಗೆ ಹೋಗೋರ್ಗೆ ಬುದ್ಧಿ ನೆಟ್ಟಗಿಲ್ಲ ಅನ್ನೋಥರ ಆಗ್ಬಿಟ್ಟಿದೆ. ಆಫೀಸ್ಗೆ ಸರಿಯಾದ ಟೈಂಗೆ ಹೋದರೆ ನೀವೇ ಬಾಗಿಲು ತೆಗೀಬೇಕು. ಲೇಟಾಗಿ ಬರೋರು "ರೀ, ಹೇಗಿದ್ರೂ ಬೇಗ ಬರ್ತೀರ. ಬಾಗಿಲು ತೆಗೆದು ಹಾಗೆ ಸ್ವಲ್ಪ ನೀರು ಚಿಮುಕಿಸಿ, ಪೊರಕೇನ ಎರಡ್ಸಲ ಆಡಿಸಿಬಿಟ್ಟರೆ ಕ್ಯಾಷುಅಲ್ ಕೂಲೀಗೆ

ಕೂಡೋ ದುಡ್ಡು ಸೇವ್ ಮಾಡಬಹುದೂಂತ ಚುಡಾಯಿಸೋದಲ್ದೇನೆ ಬಾಸ್ ಕಿವೀಲಿ "ಸಾರ್, ಇವ್ನು ಇಷ್ಟು ಬೇಗಾ ಬರೋದು ನೋಡಿದ್ರೆ ಯಾಕೋ ಸ್ವಲ್ಪ ಡೌಟ್ ಬರ್‍ತಾ ಇದೆ ಸಾರ್. ಯಾರೂ ಇಲ್ಲದೇ ಇರೋವಾಗ ನಂ ಕಂಪನೀ ಖರ್ಚಲ್ಲೇ ಅಮೇರಿಕಾದಲ್ಲಿರೋ ಇವನ ತಮ್ಮನಿಗೆ ಈಮೇಲ್ ಕಳಿಸ್ತಾ ಇದಾನೇನೊ. ಇಲ್ಲಾ ಫೋನ್ ಮಾಡ್ತಿರಬೋದು ಸಾರ್. ಸ್ವಲ್ಪ ನಿಗಾ ಇಡಬೇಕು ಸಾರ್" ಅಂತ ಹೇಳಿ ಬಾಸ್ ಮನಸ್ಸು ಹುಳ್ಳಗೆ ಮಾಡೋದಕ್ಕೂ ಹೇಸಲ್ಲ ಈ ಲೇಟ್ ಬರೋ ಜನ.

"ಆರತಕ್ಷತೆ 6-30ಕ್ಕೇ" ಅಂತ ಪ್ರಿಂಟಿಸಿರೋ ಮದುಗೆ 7-15 ಹೋದ್ರೂ ಛತ್ರ ಖಾಲಿ ಇರುತ್ತೆ. ಹೂವಿನ ಅಲಂಕಾರ ಮಾಡೋನು ಆಗ್ತಾನೇ ಕೆಲಸ ಶುರು ಹಚ್ಚಿರ್‍ತಾನೆ. ಸೂಟೂ, ಬೂಟೂ ಹಾಕ್ಕೊಂಡ್ ಅಲ್ಲಿಂದಿಲ್ಲಿ, ಇಲ್ಲಿಂದಲ್ಲಿ ಓಡಾಡ್ತಾ ಇರೋದು "ಕೂತ್ಕೋಳಿ, ಕೂತ್ಕೋಳಿ. ಮದುಮಗಳು ಬ್ಯೂಟೀ ಪಾರ್ಲರ್‍ಗೆ ಹೋಗಿದ್ದಾಳೇ, ಇನ್ನೇನು ಬಂದ್ಬಿಡ್ತಾಳೆ" ಅಂತಾರೆ. ಎಂಟಕ್ಕೋ ಇಲ್ಲಾ ಎಂಟೂಕಾಲಿಗೋ ಹುಡುಗಿ ಬಂದಾಗ ಮುಂದೆ ಹದಿನೈದು ನಿಮಿಷ ವೀಡಿಯೋನಿಗೇ ಮೀಸಲು. ಒಂದ್ಸಲ ಒಂದು ಮದುವೇಲಿ ಒಂಬತ್ತಾದರೂ ವೀಡಿಯೋ ಗಲಾಟೆ ನಿಲ್ಲಲಿಲ್ಲ. ನಾನು ವರನ ಕೈಕುಲುಕಲು ಹೋದಾಗ ವೀಡಿಯೋದೋನು "ಶ್ ಶ್. ಹೀಗ್ಬನ್ರೀ. ಇನ್ನೂ ವೀಡಿಯೋ ಮುಗಿದೇ ಇಲ್ಲಾ ಆಗಲೇ ಬಂದುಬಿಟ್ಟರು. ಏನೋ ಜನಾನೋ. ಬರೀ ಅವಸರ ಇವರಿಗೆ" ಅನ್ನೋದೇ?

ನನ್ನ ಸಲಹೆ ಏನಪ್ಪಾ ಅಂದರೆ ರಿಸೆಪ್ಷನ್ ಎಷ್ಟು ಹೊತ್ತಿಗಾದರೂ ಶುರು ಹಚ್ಚಲಿ ಪರವಾಗಿಲ್ಲ. ಆದರೆ ಕೈಲಿ ಇರೋ ಪೊಟ್ಟಣಾನೋ ಇಲ್ಲಾ ಕವರ್‍ನೋ ಯಾರಾದರೂ ಒಬ್ಬರು ಬಂದೋರು ಕೈಯಿಂದ ಇಸ್ಕೋಂಡು ಡೈನಿಂಗ್ ಹಾಲ್‌ಗೆ ಗೈಡ್ ಮಾಡ್ಬಿಡ್ಲಿ. ಅಲ್ಲಿ ನಾವು ನಿಧಾನವಾಗಿ ಬಫೆ ಸ್ವೀಕರಿಸಿ, ಬೀಡಾ ಅಗೀತಾ ಬರೋ ಹೊತ್ಗೆ ಹುಡುಗೀ ಬಂದು, ವೀಡಿಯೋ ಗೀಡಿಯೋ ಎಲ್ಲಾ ಮುಗಿದಿರೋ ಛಾನ್ಸ್ ಇದೆ. ಹಾಗಿಲ್ಲದಿದ್ರೂನೂವೇ ಪರವಾಗಿಲ್ಲ, ನಮ್ಮ ಬಂದ ಕೆಲಸ ಆಯ್ತಲ್ಲಾ, ನಾವು ಮನೇಗೆ ಬಂಡಿ ಬಿಡಬೋದು. ಅಷ್ಟಲ್ದೆ ಹಿಂದಿನೋರು ಹೇಳೀದ್ರಲ್ಲ "ಮದುವೇ ಮನೇಲಿ ಗಂಡಿಗೆ ಹೆಣ್ಣಾಸೆ, ಹೆಣ್ಣಿಗೆ ಗಂಡಾಸೆ, ಉಳಿದೋರಿಗೆ ಕೂಳಿನ ಆಸೇಂತ."

ಒಂದು ಸರ್ಕಾರೀ ಸಭೆ ಮುಕ್ಕಾಲು ಗಂಟೆ ಲೇಟಾಗಿ ಶುರು ಆಯ್ತು. ಮೂರು ಜನ ಸಚಿವರು ಅಲ್ಲಿದ್ದರು. ಸಭೆ ಶುರು ಆದಾಗ ಒಬ್ಬ ಸಚಿವರು "ನೋಡಿ, ಇವತ್ತು ಲೇಟಾಗಿದ್ದಕ್ಕೆ ನಾವಲ್ಲಾ ಕಾರಣ. ನಾವು ಮೂವರೂ

ಸರಿಯಾದ ಟೈಂಗೇ ಬಂದಿದ್ವಿ, ಇಲ್ಲಿನ ಕಾರ್ಯಕರ್ತರೇ ಟೈಂಗೆ ಸರಿಯಾಗಿ ಶುರು ಮಾಡಲಿಲ್ಲಾ'' ಅಂದಾಗ ನಾನೇನು ಬೆಂಗಳೂರಲ್ಲಿದ್ದೇನೋ ಇಲ್ಲಾ ಯಾವುದಾದರೂ ರಾಮರಾಜ್ಯದಲ್ಲಿದ್ದೇನೋ ಅನ್ನೋ ಸಂಶಯ ಬಂತು. ಇದು ನಿಜವೇ? ಮೂರು ಜನ ಸಚಿವರು ಸರಿಯಾದ ಟೈಂಗೇ ಬಂದ್ರೂ, ಅಂದರೆ ಅದು ಸಾಮಾನ್ಯವೇ? ಸಾಧ್ಯವೇ? ನಂಬಲು ಸಾಧ್ಯವೇ? ಇಲ್ಲಾ ಆಗಲೇ ಕಲಿ ಯುಗ ಮುಗಿದು ಸತ್ಯ ಯುಗ ಶುರು ಆಗೋಯ್ತೇ?

ದಿನಾಲೂ ಲೇಟಾಗಿ ಬರೋ ಪ್ರಾಣಿನ ಮ್ಯಾನೇಜರ್ ''ರೀ ಬೆಳಿಗ್ಗೆ ಅರ್ಧ ಗಂಟೆ ಬೇಗ ಏಳೋದು ಪ್ರಾಕ್ಟೀಸ್ ಮಾಡ್ಕೊಳ್ರೀ'' ಅಂದಾಗ ಆ ಪ್ರಾಣಿ ''ಸಾರ್ ನಾನೇನೋ ಪ್ರಾಕ್ಟೀಸ್ ಮಾಡ್ಕೋತೀನಿ. ಆದರೆ ನಾನು ಬರೋ ಬೀ ಟಿ ಎಸ್ ಬಸ್ಸಿನ ಡ್ರೈವರ್ರೂ ಪ್ರಾಕ್ಟೀಸ್ ಮಾಡ್ಕೊಬೇಕಲ್ಲಾ ಸಾರ್ ಬೇಗ ಏಳೋದನ್ನ. ನಾನೊಬ್ನೇ ಮಾಡ್ಕೊಂಡ್ರೆ ಏನ್ಸಾರ್ ಪ್ರಯೋಜ್ನ'' ಅನ್ನೋದೆ?


ಒಂಭತ್ತು ಗಂಟೇಗೆ ಶುರು ಆಗೋ ಆಫೀಸಿಗೆ ಅಲ್ಲಿನ ಆಫೀಸರ್ 10ಕ್ಕೆ ಬರೋದು ವಾಡಿಕೆ. ಒಂದಿನ ಅವ ಬೇಗನೇ ಬಂದ್ಬಿಟ್ಟ. ಆಫೀಸ್ ಅರ್ಧ ಖಾಲೀ ಇತ್ತು. ''ಎಲ್ರೀ ಮಿಕ್ಕೋರು? ಆಫೀಸ್ ಟೈಂಗೆ ಬರಬೇಕೂಂತ ಗೊತ್ತಿಲ್ಲವೇನ್ರಿ ಅವರಿಗೆಲ್ಲಾ? ಲೇಟಾಗಿ ಬರೋರ ಹೆಸರಿನ ಲಿಸ್ಟ್ ಕೊಡಿ. ಆಕ್ಷನ್ ತೊಗೋತೀನಿ'' ಅನ್ನೋಣ ಅಲ್ಲಿದ್ದ ಕಿಲಾಡಿ ಒಬ್ಬ ''ಸಾರ್ ಅವರೆಲ್ಲಾ ಇನ್ನೇನು ಬಂದ್ಬಿಡ್ತಾರೆ ಸಾರ್. ಅವರೆಲ್ಲ ದಿನಾಲೂ ನೀವು ಬರೋಕ್ಮುಂಚೇನೆ ಬರ್‍ತಾ ಇರ್ಲಿಲ್ವಾ ಸಾರ್? ಅವರಿಗೇನು ಗೊತ್ತೂ ಸಾರ್ ನೀವು ಇವತ್ತು ಇಷ್ಟು ಬೇಗ ಬರ್‍ತೀರೀಂತ'' ಅಂದೇಬಿಟ್ಟ.

ಭಾನುವಾರ ಬೆಳಿಗ್ಗೆ ಬ್ಯಾಂಕ್‌ಗೆ ಹೋಗಿದ್ದೆ ದುಡ್ಡು ತೆಗೆಯೋಕೆ. ಕ್ಯಾಷಿಯರ್ ಬಂದಿರಲಿಲ್ಲ. ಕೌಂಟರ್ ಮುಂದೆ ಸುಮಾರು ಗುಂಪು ಸೇರಿತ್ತು. ಲೇಟಾಗಿ ಬಂದ ಕ್ಯಾಷಿಯರ್ನ ಮ್ಯಾನೇಜರ್ ''ನೋಡ್ರಿ ಎಷ್ಟು ಜನ ನಿಮಗೋಸ್ಕರ ಕಾದಿದ್ದಾರೇಂತ'' ಅಂದಾಗ ಆ ಕ್ಯಾಷಿಯರ್ ನೋಟಿನ ಕಂತೇನಾ ಎಣಿಸ್ತಾನೇ ''ಈ ದೇಶದಾಗೆ ಟ್ರೈನ್‌ಗಳು ಲೇಟಾಗುತ್ವೆ, ಪ್ಲೇನ್ಗಳು ಲೇಟಾಗುತ್ವೆ, ಬಸ್‌ಗಳು ಲೇಟಾಗಿ ಬರುತ್ವೆ, ಮಳೆ ತರೋ ಮಾನ್ಸೂನ್ ಕೂಡಾ ಈ ವರ್ಷ ಲೇಟೇ. ಹೀಗಿದ್ರೂನೂವೆ ಅವನ್ನೆಲ್ಲಾ ಬಿಟ್ಟು ಈ ಬಡಪಾಯಿ ನಾನೊಬ್ಬನೇನಾ ಸಾರ್ ನಿಮ್ಮ ಕೈಗೆ ಸಿಕ್ಕಿದ್ದು'' ಅಂದಾಗ ಮ್ಯಾನೇಜರ್ ಮರು ಮಾತಾಡ್ದೆ ತನ್ನ ಕ್ಯಾಬಿನ್ಗೆ ಹೋಗಿ ಬಾಗಿಲು ಹಾಕ್ಕೊಂಡ್ರು.

ಒಂದು ಜನರಲ್ ಬಾಡೀ ಮೀಟಿಂಗ್. ಎಲ್ಲಾ ಸಜ್ಜಾಗಿತ್ತು. ಮೈಕ್ನೋನು ''ಹಲೋ ಹಲೋ ಮೈಕ್ ಟೆಸ್ಟಿಂಗ್ ಹಲೋ ಹಲೋ'' ಅಂತ ಕೂಗ್ತಿದ್ದ. ಬಫೆ

ಅಡಿಗೆಯೋರು ಆಗಲೇ ಬಂದು ಪ್ಲೇಟ್ಸ್ ಜೋಡಿಸ್ತಿದ್ರು. ಎಲ್ಲಾ ರೆಡಿ. ಆದರೆ ಜನಾನೇ ಇಲ್ಲ. ಕೋರಂ ಇಲ್ದೆ ಮೀಟಿಂಗ್ನ ಅರ್ಧ ಗಂಟೆ ಮುಂದೂಡಿದ್ರು. ನಾನು ಸೆಕ್ರೆಟರೀನ ''ಅಲ್ರೀ. ಜನಾನೇ ಇಲ್ಲ. ಇಷ್ಟೊಂದು ಅಡುಗೆ ಮಾಡಿಸಿದ್ದೀರಲ್ಲಾ ವೇಸ್ಟ್ ಆಗುಲ್ವಾ'' ಅಂದಾಗ ಅವ ''ನೋಡ್ಕೊಂಡಿರಿ ರಾಯರೇ. ಊಟಕ್ಕೆ ಎಷ್ಟು ಜನ ಬರ್ತಾರೇಂತ. ಮಾಡಿಸಿರೋ ಪೂರೀ, ಜಹಾಂಗೀರ್ ಸಾಲೋದೇ ಡೌಟ್'' ಅಂದ್ರು. ಸರಿಯಾಗೇ ಹೇಳಿದ್ರು. ಊಟಕ್ಕೆ ನೂಕು ನುಗ್ಗಲಾಗಿ ಐಟಂಗಳು ಸಾಲದೇ ಹೋಗಿ ಪಾಪ ಸೆಕ್ರೆಟರಿ ಹೀನಾಮಾನ ಬೈಸಿಕೊಂಡ್ರು. ಅದಕ್ಕೇ ಅಲ್ವೆ ಹೇಳೋದು ''ಮೀಟಿಂಗ್‌ಗೆ ಚಕ್ಕರ್, ಊಟಕ್ಕೆ ಹಾಜರ್'' ಅಂತ.

ಲೇಟಾಗಿ ಬರೋದ್ರಲ್ಲೂ ಅಡ್ವಾಂಟೇಜ್ ಇದೆ ಒಪ್ಪಿಕೊಳ್ಳಲೇ ಬೇಕು. ನೋಡಿ ಮೊನ್ನೆ ಅಮೇರಿಕಾದಲ್ಲಿ WTC ಸುಟ್ಟಾಗ, ಬೇಗ ಹೋಗಿದ್ದೋರೆಲ್ಲಾ ಸಿಕ್ಕಿಕೊಂಡರು. ಲೇಟಾದೋರೆಲ್ಲಾ ಬಚಾವಾದರು. "be late. It may save your skin" ಅನ್ನೊಲ್ಲಬೋದಲ್ವಾ?



ಅನ್ನದಾನಕ್ಕಿಂತ

– ಬೇಲೂರು ರಾಮಮೂರ್ತಿ

ಮೊನ್ನೆ ಒಂದ್ ವಾರದ ಕೆಳಗೆ ತಿಮ್ಮಯ್ಯನ ಮನೆ ಕಟ್ಟೇಲಿ ಕೂತು ಪುರಾಣ ಒದರ್ತಾ ಇದ್ದಾಗ ಬಂದ ಮಾತು, ಚರ್ಚೆ ಇವು ಏನ್ ಮಾಡ್ತಪ್ಪಾಂದ್ರೆ ಶಿಂಗ್ರೈಯ್ಯಂಗಾರಿ ತನ್ನ ಮನೇಲಿ ಒಂದು ಸಮಾರಾಧನೆ ಏರ್ಪಾಡು ಮಾಡೋ ಹಾಗಾಯ್ತು. ಶಿಂಗ್ರೈಯ್ಯಂಗಾರಿ ಭಾರೀ ಜುಗ್ಗ ಅಂತ ಟೈಟ್ಲು ಪಡ್ಕೊಂಡಿದಾನೆ. ಅವನತ್ರ ಏನಾದ್ರೂ ಹೊಡ್ಕೋಬೇಕಾದ್ರೆ ಶಿಂಗ್ರೈಯ್ಯಂಗಾರಿಗೆ ಗೊತ್ತಿಲ್ದ ಹಾಗೆ ಬೆಟ್ ಕಟ್ಕೊಂಡಿರ್ತಾರೆ. ಈಗ ಬೆಟ್ಟೂ ಇಲ್ಲ ಎಂಥದೂ ಇಲ್ಲ. ಎಲ್ಲ ಓಪನ್ನೇ.

ವಯಸ್ಸಾದ ಮುದಿಗೊಡ್ಡುಗಳಿಗೆ ಹರಟೆ ಹೊಡೆಯೋಕೆ ವಿಷಯಕ್ಕೇನು ಬರವೇ ಅಂತ ಪಡ್ಡೆ ಹುಡುಗರು ಆಡ್ಕೋತಾರೆ. ಈ ಹಿಂದೆ ಅದ್ಯಾವ್ದೋ ಹಿಂದಿ ಸಿನಿಮಾದಲ್ಲಿ ಹೇಮಮಾಲಿನಿ ಎಷ್ಟ್ ಸಾರಿ ಡ್ರೆಸ್ ಛೇಂಜ್ ಮಾಡಿದ್ಲು ಅನ್ನೋ ವಿಚಾರಕ್ಕೆ ಸಖತ್ ಚರ್ಚೆ ಆಯ್ತು. ತನ್ನ ವಾದನೇ ಮಂಡಿಸ್ತಾ ತಿಮ್ಮಯ್ಯ ಸ್ವಲ್ಪ ಖಾರವಾಗಿ ಅವಳು ಮುನ್ನೂರ ನಲವತ್ತು ಸಾರಿ ಡ್ರೆಸ್ ಛೇಂಜ್ ಮಾಡಿರೋದು ನಾನೇ ನೋಡಿದೀನಿ ಅಂದುಬಿಟ್ಟ. ಅದನ್ನೇ ಪಟ್ಟಾಗಿ ಹಿಡ್ಕೊಂಡಿದ್ದ ಶಿಂಗ್ರೈಯ್ಯಂಗಾರಿ, ಸೀನಪ್ಪ, ಮಂಕ ಮುಂತಾದವರು, ಅವಳು ಡ್ರೆಸ್ ಛೇಂಜ್ ಮಾಡೋದನ್ನಾ ನೀನು ಹೇಗೆ ನೋಡ್ದೆ. ಇರು ನಿನ್ ಹೆಂಡ್ತಿಗೆ ಹೇಳ್ತೀನಿ ಅಂತ ಆಟಕಾಯಿಸಿದ್ರು. ಹೀಗೆ ಏನೇನೋ ವಿಚಾರ ಚರ್ಚೆ ಮಾಡ್ತಾನೇ ಇರ್ತಾರೆ.

ಹೀಗೊಂದು ದಿನ ಈ ನಾಲ್ವರೂ ಚರ್ಚೆಗೆ ಕೂತಾಗ ದಾನಗಳಲ್ಲಿ ಯಾವುದು ಶ್ರೇಷ್ಠ ಅನ್ನೋ ಮಾತು ಬಂತು. ಒಬ್ಬೊಬ್ಬರೂ ಒಂದೊಂದು ವಾದ ಮಂಡಿಸಿದರು. ಸೀನಪ್ಪ ಹೇಳ್ದ ಸತ್ಪಾತ್ರರಿಗೆ ಮಾಡಿದ ಎಲ್ಲ ದಾನವೂ ಶ್ರೇಷ್ಠ ಅಂತ, ಮಂಕ (ಇವರು ಮಂಡ್ಯದ ಕಲ್ಲೇಶಿಯವರು ಅಂತ. ಇವರನ್ನು ಎಂಕೆ ಅಂತ ಕರೆಯೋರು. ಒಂದ್ಸಾರಿ ಯಾರೋ ಎಂಕೆ ಅನ್ನೋಕೆ ಹೋಗಿ ಮಂಕೆ ಅಂದರು. ಆಮೇಲೆ ಅದು ಕನ್ನಡದ ಇನಿಷಿಯಲ್ ಆಗಿ ಮಂಕ ಆಯ್ತು) ಹೇಳಿದ್ರು ನೀರು ದಾನ ಬಹಳ ಶ್ರೇಷ್ಠ ಅಂತ. (ಯಾಕೇಂದ್ರೆ, ಅದಕ್ಕೆ ಮೂರು ಕಾಸಿನ ಖರ್ಚಿಲ್ವಲ್ಲ) ತಿಮ್ಮಯ್ಯ ಹೇಳ್ದ ವಸ್ತ್ರದಾನ ಬಹಳ ಶ್ರೇಷ್ಠ ಅಂತ. ಕೊನೆಗೆ ಶಿಂಗ್ರೈಯ್ಯಂಗಾರಿ ಇವ್ಯಾವೂ ಅಲ್ಲ ದಾನಗಳಲ್ಲಿ ಶ್ರೇಷ್ಠವಾದದ್ದು ಅನ್ನದಾನ. ಅನ್ನ ಪ್ರಾಣ ಉಳಿಸತ್ತೆ, ಚೈತನ್ಯ ಕೊಡುತ್ತೆ. ಆದ್ರಿಂದ ಅನ್ನದಾನವೆ ಶ್ರೇಷ್ಠ ಅಂದ್ರು. ಹೀಗೆ ಒಬ್ಬೊಬ್ರೂ ತಮ್ಮ ತಮ್ಮ ವಾದನೇ ಸರಿ ಅಂತ ಕೂಕ್ಕೋತಾ ಇದ್ದಾಗ ಮಧ್ಯೆ ಬಾಯಿ ಹಾಕಿದ ಮಡಿ ಹೆಂಗಸು ಮೈನಾವತಿ ಯಾಕೆ ಹಂಗೆ ಕವಕವಾಂತ

ಬಿಡ್ಕೋತೀರ, ಶಿಂಗ್ರಯ್ಯಂಗಾರಿ ಹೇಳಿದ್ದು ಕರಕ್ಟು, ಎಲ್ಲ ದಾನಕ್ಕಿಂತ ಅನ್ನದಾನವೇ ಶ್ರೇಷ್ಠ ಅಂತ ತನ್ನ ವಾದವನ್ನೂ ಮುಂದಿಟ್ಟಳು.

ಶಿಂಗ್ರೈಯ್ಯಂಗಾರಿ ಮೀಸೆ ಬಿಟ್ಟರ್ಲಿಲ್ಲ. ಅದಕ್ಕೆ ಮೀಸೆ ಇರ್ತಿದ್ದ ಜಾಗ ಸವರಿಕೊಂಡ್ರು. ''ತಿಳ್ಕೊಳ್ರಯ್ಯ ಈ ಶಿಂಗ್ರೈಯ್ಯಂಗಾರಿ ಯಾವುದನ್ನೂ ಸುಮ್ನೆ ಹೇಳೋಲ್ಲ'' ಅಂದರು. ''ಹಾಗಿದ್ರೆ ನಾಡಿದ್ದು ಭಾನುವಾರ ನಿಮ್ಮನೇಲಿ ಅನ್ನದಾನ. ನಾವೆಲ್ಲ ಬರ್ತಿವಿ. ಜೊತೆಗೆ ಇನ್ನೊಂದಿಷ್ಟು ಜನಾನ್ನೂ ಕರ್ಕೊಂಡ್‌ಬರ್ತೀವಿ'' ಅಂದ ತಿಮ್ಮಯ್ಯ. ''ಬನ್ರಯ್ಯ ಅದಿಕ್ಕೇನು'' ಅಂದ್‌ಬಿಟ್ಟರು ಶಿಂಗ್ರೈಯ್ಯಂಗಾರಿ. ಆದ್ರೆ ಎಲ್ರಿಗೂ ಗೊತ್ತು ಅವರು ಎಚ್‌ಎಂವಿ ಅಂತ ಅಂದ್ರೆ ಹಿಸ್ ಮೇಡಮ್ಸ್ ವಾಯ್ಸ್ ಅಂತ. ಅದಿಕ್ಕೆ ಮಂಕ ಅವರತ್ತ ವಾಲಿ ''ಕೊಟ್ಟ ಮಾತಿಗೆ ತಪ್ಪಬಾರದಪ್ಪ. ನಾಡಿದ್ದು ಭಾನುವಾರ ಬಂದೇ ಬರ್ತೀವಿ'' ಅಂದ.

''ನಾನು ಯಾವುದಕ್ಕೂ ಇನ್ನೊಂದ್ಸಾರಿ ನಿಮಗೆಲ್ಲ ಹೇಳ್ತೀನಿ. ಯಾಕೇಂದ್ರೆ ಮನೆ ಅನುಕೂಲನೂ ನೋಡ್ಕೋಬೇಕಲ್ಲ. ನಿಮ್ಮನೆಲ್ಲ ಅನ್ನದಾನಕ್ಕೆ ಬನ್ನಿ ಅನ್ನೋದು, ಆಮೇಲೆ ಅವಳು ಮೂಲೆ ಹಿಡಿದು ಕೂರೋದು ಆದ್ರೆ ನಾನೇ ಸೌಟು ಹಿಡೀಬೇಕಾಗುತ್ತೆ'' ಅಂದಾಗ ಮಂಕ ''ಅದನ್ನೂ ನಿಮ್ ಹೆಂಡ್ತಿನ ಕೇಳಬೇಕೇ . ನೀವು ಲೆಕ್ಕ ಇಟ್ಕೊಂಡಿಲ್ವೆ'' ಅಂತ ರೇಗಿಸಿ ಬೈಸಿಕೊಂಡ.

ಮನೆಗೆ ಬಂದ ಶಿಂಗ್ರೈಯ್ಯಂಗಾರಿಗೆ ಆಘಾತ ಕಾದಿತ್ತು. ''ಏನ್ರೀ ಸುಮ್‌ಸುಮ್ನೆ ಅನ್ನದಾನ ಮಾಡೋಕೆ ನಿಮಗೇನು ಹುಚ್ಚೆ. ಅಷ್ಟೊಂದು ಯಾಕ್ರೀ ಖರ್ಚು ಮಾಡ್ಬೇಕು. ಅದೂ ನಿಮ್ಮ ಸೋಂಭೇರಿ ಕಟ್ಟೆಗೆ. ಆಗೊಲ್ಲ ಅಂದುಬಿಡಿ'' ಅಂದರು ಅಲಮೇಲಮ್ಮ. ಅಲಮೇಲಮ್ಮ ಅವರ ಮನೇಲಿ ಎಲ್ಲಾದಕ್ಕೂ ಮೇಲಮ್ಮ. ಅಂದ್ರೆ ಅವರು ಹೇಳಿದ್ದೇ ಮೇಲು. ಆದ್ರೆ ಈ ವಿಚಾರದಲ್ಲಿ ಶಿಂಗ್ರೈಯ್ಯಂಗಾರಿ ಮೇಲಾಗಲು ಟ್ರೈ ಮಾಡಿದರು. ಪದೇಪದೇ ಜನಿವಾರ ಸರಿಮಾಡ್ಕೊಂಡು, ಕುರುಚಲು ಗಡ್ಡ ಕೆರ್ಕೊಂಡು, ಒಂದೊಂದು ಪೃಷ್ಠದ ಮೇಲಿನ ಪಂಚೇನೂ ಸರಿಮಾಡ್ಕೊಂಡು, ''ಅಲ್ಲಾ ಅವರಿಗೆ ಹೇಳಿಬಿಟ್ಟಿದೀನಿ. ಹೇಗೋ ಒಂದು ಮಾಡಿಬಿಟ್ರೆ ಸರಿ. ಹೆಚ್ಗೆ ಜನ ಇಲ್ಲ'' ಅಂದರು. ಆದರೆ ಅಲಮೇಲಮ್ಮನವರದು ಹುಕುಂ ಅಂದ್ರೆ ಹುಕುಂ. ಅದು ಬದಲಾಗೋ ಹಾಗೇ ಇಲ್ಲ.

ಮಾರನೇ ದಿನ ಕಟ್ಟೆಗೆ ಹೋದ್ರೆ ಕೆಟ್ಟೆ ಅಂದ್ಕೊಂಡು ಮನೇಲೇ ಕೂತರು. ಅನ್ನದಾನಕ್ಕೆ ಸರಿಯಾದ ದಾರಿ ಹುಡುಕ್ತಿದ್ರು. ಹೋಗ್ಲಿ ಹೋಟ್ಲಲ್ಲಿ ಕರ್ಕೊಂಡ್ ಹೋಗಿ ಕೊಡಿಸೋಣ ಅಂದ್ರೆ ಅದು ದಾನ ಅನಿಸಿಕೊಳ್ಳೋಲ್ಲ. ಹೋಗ್ಲಿ ನನ್ನ ಹೆಸರಿನಲ್ಲಿ ಬೇರೆ ಮನೇಲಿ ಮಾಡೋಣ ಅಂದ್ರೆ ಅದೂ ಸರಿಹೋಗಲ್ಲ. ಆದ್ರೆ ನಮ್ಮನೇಲೇ ಆಗಬೇಕು. ಹೇಗೆ? ಅಲಮೇಲುನ ತವರಿಗೆ ಕಳಿಸಿಬಿಟ್ರೆ! ಈಗ

ತವರಿಗೆ ಯಾಕೆ ಹೋಗ್ತಾಳೆ? ಹೋಗೋ ಟೈಮಲ್ಲೇ ಹೋಗ್ದೆ ಇಲ್ಲೇ ಕುಕ್ಕರ್ ಬಡಿದಿದ್ಲು. ಸದಾ ನನ್ನನ್ನು ಅನುಮಾನದಿಂದಲೇ ನೋಡೋ ಅವಳು ಇದಕ್ಕೆ ಒಪ್ತಾಳ್ಯೇ. ಹೋಗ್ಲಿ ದೇವಸ್ಥಾನದಲ್ಲಿ ಹಾಕಿಸಿಬಿಟ್ರೆ, ಅದೂ ಸರಿಹೋಗಲ್ಲ. ಒಳ್ಳೆ ಪೀಕಲಾಟಕ್ಕೆ ಬಂತಲ್ಲ ಅಂತ ಚಿಂತೆ ಮಾಡ್ತಾ ಇರುವಾಗಲೇ ಅವರ ಮಗಳು ಗೋದಾ ಬಂದಳು. ಯಾಕೋ ತುಂಬಾ ಸುಸ್ತಾಗಿದ್ಲು.

ಅಲಮೇಲು ಮಗಳಿಗೆ ನೀರು ತಂದುಕೊಟ್ಳು.

''ಅಂಗಿತ್ಲಿಂದ ವಂದ್ಕ್ಯೊಂಡಿಕ್ರೆ. ಇಷ್ಟೊಂದು ಸುಸ್ತು ಕಾಣ್ಕೊಂಡಿಕ್ಕ್ರ್ನ!'' ಅಂದಳು. ಮೊಮ್ಮಗು ಕಂಕುಳಲ್ಲಿ ಕುಕ್ಕರಿಸಿತ್ತು.

(ಯಾವ ಭಾಷೆ ಅಂತೀರ, ಅದು ಹಾಗೇ) ಗೋದ ಮಗೂನ ತೋರಿಸಿ

''ಅಮ್ಮಾ ಇತ್ತಿಕ್ಕೆ ವರುವರುಷ ಆಚಿ ಇಲ್ಯಾ. ವರುಷದ ಹಬ್ಬ ಮಾಡ್ಬೇಕಲ್ಲ ಯಾವುದಾದರೂ ಛತ್ರ ಸಿಕ್ಕರದೋ ಅಂತ ಪಾತ್ಕೊಂಡ್ ವರ್ಲ್ಲಾ ಅಂತ ಪೋಯಿರಿಂದೆ ಒಂದ್ ಛತ್ರನೂ ಖಾಲಿಯೇ ಇಲ್ಲೆ. ಯಾರನ್ನು ಕೇಟ್ಟಾಲೂ ಖಾಲಿ ಇಲ್ಲಮ್ಮ, ಖಾಲಿ ಇಲ್ಲಮ್ಮ ಅಂತ ಚೊಲ್ಲಿಟ್ಟ'' ಅಂದಳು.

ಶಿಂಗ್ರೈಯ್ಯಂಗಾರಿ ಕಿವಿ ಚುರುಕಾಯಿತು.

''ಎನ್ನಮ್ಮಾ ಇಂಥಾ ಪೆರಿಯ ಹಾತ್ ವಿಚ್ಕೊಂಡು ಎಂಗೆಂಗೋ ಎನ್ನಾತಿಕ್ಕೆ ಪೋರೆ ಇಂಗೇ ಪಣ್ಣಿಡು'' ಅಂದ್ರು.

ಅದು ಅಲಮೇಲೂಗೂ ಮೆಚ್ಚಿಕೆಯಾಯ್ತು.

ಗೋದಾನೂ ಒಪ್ಕೊಂಡ್ಳು.

ತಾರೀಖು ಯಾವತ್ತು ಅಂತ ಯೋಚನೆ ಮಾಡಿ ಅದಕ್ಕೊಂದು ಭಾನುವಾರ ಗೊತ್ತು ಮಾಡಿದರು.

''ಅಮ್ಮಾ ಗೋದಾ, ಮಗು ಹುಟ್ಟಿದ ಹಬ್ಬಕ್ಕೆ ನನ್ನ ಸ್ನೇಹಿತರನ್ನ ಕರೀಲಾಮ್ಮ'' ಅಂತ ಕೇಳಿದರು, ಶಿಂಗ್ರೈಯ್ಯಂಗಾರಿ.

''ಇದೇನಪ್ಪ ಇಪ್ಪಡಿ ಕೇಕ್ರೆ. ನಿಮ್ಮನೆ ಫಂಕ್ಷನ್ ಅಲ್ವೆ, ಕರೀಪ್ಪ ಎನ್ನಾತಿಕ್ಕೆ ಸಂಕೋಚೋ'' ಅಂದಳು.

ಸರಿ ಕಟ್ಟಿಗೆ ಕೆಟ್ಟೆ ಅಂತ ಹೋಗ್ಲಿಲ್ಲ, ಬದುಕ್ದೆ ಅಂತ ಹೋದ್ರು ಶಿಂಗ್ರೈಯ್ಯಂಗಾರಿ.

''ನೋಡ್ರಯ್ಯ ಮುಂದಿನ ಭಾನುವಾರ ನಮ್ಮನೇಲಿ ಅನ್ನದಾನ. ಎಲ್ರೂ ಬನ್ನಿ'' ಅಂದು ಅನೌನ್ಸ್ ಮಾಡಿದರು.

ಅಂತೂ ಶಿಂಗ್ರೈಯ್ಯಂಗಾರಿ ಹೇಗೋ ಹೆಂಡ್ತಿಗೆ ಪುಸಲಾಯಿಸಿ ಒಪ್ಸಿದಾನಲ್ಲ ಅಂತ ತಿಮ್ಮಯ್ಯ ಅಂಡ್ ಕೋ ಭಾನುವಾರ ಮೆತ್ತೋಕೆ ರೆಡಿಯಾದರು.

ಆದರೆ ಭಾನುವಾರ ಅಲ್ಲಿಗೆ ಹೋದಾಗಲೇ ಅವರಿಗೆ ಗೊತ್ತಾದದ್ದು ಶಿಂಗ್ರೈಯ್ಯಂಗಾರಿ ಗುಂಪಲ್ಲಿ ಗೋವಿಂದ ಮಾಡಿದಾನೆ ಅಂತ.

ಆದ್ರೇನಂತೆ ಎಲ್ರೂ ಹೊಟ್ಟೆತುಂಬಾ ಉಂಡರು. ಎಲ್ರಿಗೂ ಎಲೆಯಡಿಕೆ ಕೊಟ್ಟು ಸಾಗಹಾಕೋ ಮುಂಚೆ ''ಆಯ್ತೇನಪ್ಪ ಅನ್ನದಾನ. ನಿಮಗೆಲ್ಲಾ ಸಂತೋಷನಾ'' ಅಂತ ಕೇಳಿದರು. ಅದಿಕ್ಕೆ ಮಂಕ ''ಶಿಂಗ್ರೈಯ್ಯಂಗಾರಿ, ನಾನು ಇದನ್ನ ಒಪ್ಪೊಲ್ಲ. ಮೊಮ್ಮಗನ ನಾಮಕರಣದ ಜೊತೆ ಇದನ್ನೂ ಸೇರಿಸಿಬಿಟ್ಯಾ. ಇದೇ ಬೇರೆ ಮಾಡಬೇಕಿತ್ತು'' ಅಂದ.

''ಹಾಗಂತ ನಾವೇನೂ ಮಾತಾಡ್ಕೊಂಡಿರ್ಲಿಲ್ವಲ್ಲ. ನಾನೂ ಅನ್ನದಾನ ಮಾಡಬೇಕೂಂತಿದ್ದೆ. ಅದೇ ದಿನಾನೇ ಮಗಳೂ ಅವಳ ಮಗನ ಹುಟ್ಟಿದ ಹಬ್ಬ ಮಾಡಬೇಕೂಂದ್ಲು''.

''ಆದ್ರೆ ಖರ್ಚು'' ಅಂದ ತಿಮ್ಮಯ್ಯ.

''ಖರ್ಚು ನಮ್ದು ಬೇರೆ ಅವಳದ್ದು ಬೇರೆ'' ಅಂತ ಶಿಂಗ್ರೈಯ್ಯಂಗಾರಿ ಅನ್ತಿದ್ದಾಗ ಅಲಮೇಲು ತಾರಕ ಸ್ವರದಿಂದ ''ಎನ್ನ ಇಂಗೆ ಕೊಂಚ ವರಿಂಗಳಾ'' ಅಂದಾಗ ಶಿಂಗ್ರೈಯ್ಯಂಗಾರಿ ''ನೀವು ನಡೀರಯ್ಯ ನಾಳೆ ಕಟ್ಟೇಲಿ ಸೇರೋಣ'' ಅಂದು ಮತ್ತೆ ಪೃಷ್ಠ ಕೆರ್ಕೊಂಡು ''ಎನ್ನಡೀ'' ಅಂತ ಒಳಗೆ ಹೋದರು.

ಇತ್ತ ಶಿಂಗ್ರೈಯ್ಯಂಗಾರಿ ಅಳಿಯ ವರದ ಅಡಿಗೆಯವರ ದುಡ್ಡು ಸೆಟ್ಲ್ ಮಾಡ್ತಿದ್ದ.



''ನಂ ಕೆಮಿಸ್ಟ್ರಿ ಟೀಚರ್
ಪಾಠ ಮಾಡಿದ್ರೆ ಎಲ್ರೂ
ಮುಷರಾಫ್ ಭಾಷಣ
ಕೇಳಿಸ್ಕೊಳ್ಳೋ ಹಾಗೆ
ಮಿಸುಕಾಡ್ದೇ ಕೂತಿರ್ತಾರೆ''

ಮರ್ಕಟೋಪಾಖ್ಯಾನ

– ಶ್ರೀಮತಿ ಅರುಣಾ ಆರ್. ಕಾರಂತ

''ಕೂಸಿನ ಕಂಡೀರ್‍ಯಾ? ನಮ್ಮ ಮುಖ್ಯಪ್ರಾಣನ ಕಂಡೀರ್‍ಯಾ'' ಎಂದು ದಾಸರೇನೋ ರಾಗವಾಗಿ ಹೇಳಿದ್ರು, ಅದೂ ಸಾಲದೆಂಬಂತೆ, ''ಅಂಜನಿ ಉದರದಿ ಪುಟ್ಟಿತು ಕೂಸು, ಲಂಕಾಪುರವನು ಸುಟ್ಟಿತು ಕೂಸು'', ಇನ್ನು ಏನೇನೋ ಮಾಡಿದ್ದು, ಮಾಡದ್ದು ಎಲ್ಲಾ ಕಪಿಚೇಷ್ಟೆಯನ್ನು ಹಾಡಿದ್ದೇ ಹಾಡಿದ್ದು, ಹೊಗಳಿದ್ದೇ ಹೊಗಳಿದ್ದು ಆ ಹನೂಮೂರ್ತಿಯ ಹನುಮಂತನ್ನ. ಅದೇ ಹಾಡನ್ನ ನಮ್ಮಮ್ಮ ಬೆಳಗಾಗ್ತಾ ಇದ್ದಂಗೆ ಗುಣಗುಣಿಸಲಿಕ್ಕೆ ಸುರು ಮಾಡ್ತಾಳೆ ..., ಪುಣ್ಯ ಬರ್ತದಂತೆ ... ಅದೂ ಸಾಕ್ಷಾತ್ ಹರಿ, ವಾಯುಗಳ ಸ್ಮರಣೆಯಂತೆ. ಆದರೆ ಅದೇ ಮಂಗಾಟಿಕೆ ನಾವ್ ಮಾಡಿದ್ರೆ ನಮ್ಮಮ್ಮ ಕೋಲ್ತಗೋತಿದ್ಲು, ಇದೆಲ್ಲ ನಾನು ಯಾಕ್ಹೇಳಿದ್ನಂದ್ರೆ ಇದು ನನ್ನ ಮರ್ಕಟ ಪುರಾಣಕ್ಕೆ ನಾಂದಿ ಅಂತ.


'ಕೇಳು ಜನಮೇಜಯ ಧರಿತ್ರೀಪಾಲ ....'' ಅಂತ ನಮ್ಮ ಸಣ್ಣನೆ ಸುಬ್ಬಣ್ಣಾಚಾರ್ರು ಭರ್ತಿ ಕತೆ ಉಳ್ಳಂತ ಭಾರತ ಕತೆಯೊಳಗಿನ ಮರ್ಕಟಾಖ್ಯಾನವನ್ನು ಹೇಳುವಂತವರಾದಾಗ, ''ವಾನರಾಸುರರ ಬಾಧೆಗೊಳಗಾಗಿ ಮನೆಮಾರನ್ನೆಲ್ಲ ಕೋಟೆ ಹನುಮಂತನ ಭಾರಕ್ಕೊಪ್ಪಿ ಹೆತ್ತೂರಿಂದ ಹತ್ತೂರಿಗೆ ತಮ್ಮ ಹೆಣ್ಣು ರಾಯಭಾರಿಯರನ್ನ ಕಳುಹಿಸಿದ್ದರಲ್ಲಾ ಆ ಊರುಗಳಿಗೆ ಹೋಗಿ ಕೆಲದಿವಸ ಊರು, ಮನೆಮಂಗಗಳನ್ನೆಲ್ಲಾ ಮರೆತು ಮಗಳಂದಿರ ಭೂರಿ ಆತಿಥ್ಯದಲ್ಲಿ ಮತ್ತಿಷ್ಟು ಪುಷ್ಟಿಗೊಂಡ ಮಿರಿಮಿರಿ ಮಿಂಚುವ ಉದರಸಮೇತ ಹೆತ್ತೂರಿನ ಮಹಾಜನಗಳು ಹಿಂತಿರುಗಿ ಬಂದಾಗ ಅಲ್ಲಿಯವರೆಗೆ ಆ ಊರಿನಲ್ಲಿ ನಡೆದ ಕಥಾಮೃತವೇ ''ಮರ್ಕಟೋಪಖ್ಯಾನ'' ಎಂಬ ಹೆಸರಿನಿಂದ ಸಾರ್ಥಕವಾಯಿತು''ಎಂದು ಒಂದೇ ಉಸಿರಿಗೆ ಒದರಿ, ಒಂದು ದೊಡ್ಡ ಉಸಿರು ತೆಗೆದುಕೊಂಡು ಚಿಟುಕಿ ನಶ್ಯಕ್ಕೆ ಕೈಚಾಚಿದರು. ಹತ್ತೂರಿನ ಹದವಾದ ಹೊಗೆಸೊಪ್ಪನ್ನು ಕೆಂಡದ ಮೇಲೆ ಕಾಸಿ ವಸ್ತ್ರಧೂಳಿಯಷ್ಟು ನುಣ್ಣಗೆ ಅರೆದ ತಂಬಾಕಿನ ಪುಡಿಗೆ ಹಸನಾದ ಹಸುವಿನ ತುಪ್ಪ ಬೆರೆಸಿ ಸಿದ್ಧವಾದ ಹತ್ತುಬಗೆಯ ನಶ್ಯವನ್ನು ಹೊತ್ತ ಹತ್ತು ಚಿಟಿಕೆಗಳು ಒಮ್ಮೆಲೆ ಆಚಾರ್ಯರ ಮುಂದೆ ಬಂದಾಗ ಧನ್ಯತಾಭಾವಮಂ ತಾಳ್ದು ಚಿಟಿಕೆಯೊಂದರ ನಶ್ಯವಂ ನಾಸಿಕಾಗ್ರಕ್ಕೇರಿಸಿ ಮುಂದಣ ಕತೆಯಮಂ ಲಾಲಿಪುದು ಎನ್ನಲಾಗಿ ... ;

ಹೆತ್ತೂರಿನ ಹಿರಿಯರಾದ ಹಿರಿಯಣ್ಣ ಜೋಯಿಸ್ರು, "ಆಚಾರ್ಯರೇ ನಾವು ಸ್ವಗ್ರಾಮವನ್ನು ತ್ಯಜಿಸಿದಂದಿನಿಂದ ಇಂದಿನವರೆಗೆ ನಡೆದ ವೃತ್ತಾಂತವನ್ನು ಆಮೂಲಾಗ್ರವಾಗಿ ಸವಿಸ್ತಾರವಾಗಿ ಹೇಳಬೇಕು" ಎಂದು ಕರಮುಗಿದು ವಿನಂತಿಸಿಕೊಂಡರು. ಆಗ ಆಚಾರ್ಯರು, "ಕುಲಬಾಂಧವರೇ, ಶಿಷ್ಯರೇ, ನೀವುಗಳು ಹೆತ್ತೂರನ್ನು ಬಿಡುವಾಗಿದ್ದ ಇಲ್ಲಿನ ಪರಿಸ್ಥಿತಿಯನ್ನು ನೆನಪಿಸಿಕೊಳ್ಳಿ, ಮಧುವನದಂತಿದ್ದ ನಮ್ಮೂರು; ಬಿಡಿಬಿಡಿಯಾಗಿದ್ದ ಸಾಲುಮನೆಗಳು, ಮನೆಗಳ ಹಿಂದೆ ಹಸಿರುವಾಣಿ, ತೋಟ ಹಣ್ಣಿನ ಮರಗಳು, ಮನೆಯ ಮುಂದೆ ಹೂತುಂಬಿದ, ಕರ್ಕಿ ಪತ್ರೆ, ಮರುಗದ, ಹಸಿರು ಹೊದ್ದು ನಳನಳಿಸುವ ಸುಂದರ ಕೈತೋಟ. ಎಷ್ಟೊಂದು ಸೊಗಸಾಗಿತ್ತು. ಏನೊಂದು ಅದ್ಭುತವಾಗಿತ್ತು! ಎಲ್ಲ ಕಣ್ಣಿಗೆ ಕಟ್ಟಿದಂತಿದೆ. ದೇಶದಲ್ಲಿ ಜಾತಿ-ರಾಜಕೀಯ ಯಾವಾಗ ಹೆಚ್ಚಾಯ್ತೊ, ಅವತ್ತೆ ನಮ್ಮ ಕೋಟೆ ಹನುಮಪ್ಪನ ಹೃದಯದಲ್ಲಿ ಸ್ವಜನಪ್ರೇಮ ಉಕ್ಕಿ ಹರೀಲಿಕ್ಕೆ ಹತ್ತಿತು. ಅಲ್ಲಿಯ ತನಕ ಊರಹೊರಗಿನ ರಸ್ತೆ ಬದಿಯ ಹುಣಿಸೆಮರದ ಮೇಲೋ, ಬೇವಿನ ಟೊಂಗೆಯ ಮೇಲೋ ಇರುತ್ತಿದ್ದ ಈ ವಾನರ ಸಂತತಿ ನೇರವಾಗಿ ಹನುಮಂತನ ಗುಡಿಯೊಳಕ್ಕೇ ಬಂದು ಭಕ್ತರು ದೇವರಿಗೆ ನೀಡಿದ ಹಣ್ಣುಕಾಯಿ ನೈವೇದ್ಯಾನ್ನ ಆ ಹನುಮಪ್ಪನ ಅಧಿಕೃತ ಹಕ್ಕುದಾರ್ರು ತಾವೇ ಎಂಬಂತೆ ತೆಗೆದುಕೊಳ್ಳಲಿಕ್ಕೆ ಹತ್ತಿದ್ವು, ಅಷ್ಟಕ್ಕೂ ನಿಲ್ಲದೆ ಮರುದಿನ ಗುಡಿಗೆ ಬಂದ ಭಕ್ತಾದಿಗಳ ಕೈಯಿಂದ ಬಾಳೆಹಣ್ಣು ಕಸಿದ್ವು, ಮತ್ತೆ ಮರುದಿನ ಮತ್ತೂ ಮುಂದುವರೆದು ಮನೆಯ ಹತ್ರ ಸುಳೀಲಿಕ್ಕ ಹತ್ತಿದ್ವು, ಮತ್ತೊಂದಿನ ಮಾಡು ಹತ್ತಿ ಕುಳಿತವು, ಮಗದೊಂದು ದಿನ ಮಾಡಿನ ಹಂಚು ಸರಿಸಿ ಮನೆಯೊಳಕ್ಕೇ ಬಂದುವು. ಅಬ್ಬಬ್ಬಬ್ಬಬ್ಬಾ! ಏನು ಧೈರ್ಯ ಅಂತೀನಿ ಮಂಗಗಳದ್ದು. ಈ ಎಲ್ಲ ಕಪಿಚೇಷ್ಟೆಗಳಿಗೂ ಆ ಹನುಮಪ್ಪನೆ ಸಪೋರ್ಟದ್ದಂತೆ. ಅಂವ ಭಕ್ತರ ಗೋಳಿಗೆ ಕಿವುಡಾಗಿ ಕಣ್ಣು ಮುಚ್ಕೊಂಡು ಕಲ್ಲಾಗಿ ಅಲ್ಲೇ ನಿಂತಿದ್ದ, ಏನು ಹೇಳಲಿ? ಮೊದಮೊದಲು ಮಂಗಗಳು ಮನೆ ಹತ್ರ ಬಂದಾಗ ಮಕ್ಳಾದಿಯಾಗಿ ದೊಡ್ಡೋರು ನೀವೂ ಸೇರಿ ಅವುಗಳನ್ನೋಡಿ ಹಲ್ಲು ಕಿರಿದವರೇ! ದಿನಾ ನಾ ಇಷ್ಟು ಮಂಗನ್ನೋಡಿದೆ, ನಾ ಅಷ್ಟು ಮಂಗನ್ನೋಡಿದೆ, ಅಲ್ಲಿ ಆ ಮರದಲ್ಲಿದೆ, ಇಲ್ಲಿ ಈ ಗಿಡದಲ್ಲಿದೆ ಎಂದು ಮಕ್ಕೆಲ್ಲಾ ಪಾಟಿ ಪುಸ್ತಕ ಬಿಟ್ಟು ಮಂಗನ್ನೋಡ್ತಾ ಇದ್ರೆ, ನಿಮ್ ಯಾರ ಬಾಯಲ್ಲೂ 'ಕಲ್ಲು ಬೀರಿ ಮಂಗನ್ನ ದೂರ ಓಡಿಸ್ರೋ' ಅಂತ ಬರಲಿಲ್ಲ. ಬದಲಿಗೆ ಆ ಕಪಿಕುಲದ ಕೊಂಗಾಟ ನೋಡಿ ನೀವೂ ಸಂತೋಷ ಪಟ್ಟೋರೇ! ಆದ್ರೆ, ಯಾವಾಗ ಈ ಮಂಗಗಳು ಮಾಡು ಬಿಟ್ಟು ಮನೆಯೊಳಕ್ಕಿಳಿದವೋ, ನೆಟ್ಟ ಹಸಿರುವಾಣಿಯನ್ನು ಹರಹರ ಮಾಡಿದವೋ, ಆಗ ನಿಮ್ಗೆಲ್ಲಾ ಇನ್ನು ಸುಮ್ನಿದ್ರೆ ಉಪಯೋಗವಿಲ್ಲ, ಈ ಮಂಗಗಳಿಗೆ ಏನಾದ್ರು ಮದ್ದರೆಯಲೇ ಬೇಕನ್ನಿಸಿದ್ದಲ್ಲವಾ? ಮುಂದೇನಾಯ್ತೇಳಿ!? ಮಂಗ ಹಾರಿ

ನಿಮ್ಮನೆ ಮೂರು ಹೆಂಚು ಒಡದ್ರೆ ಅದನ್ನ ಓಡಿಸೋ ಗಡಿಬಿಡಿಯಲ್ಲಿ ನಿಮ್ಮ ಕೈಯಿಂದ ಮತ್ತೆ ನಾಲ್ಕು ಹೆಂಚು ಹೋಯ್ತು. ಮಕ್ಕಳ ಕೈಯಲ್ಲಿದ್ದ ತಿಂಡಿ ಮಂಗನ ಕೈಸೇರಿತು. ಮಂಗನಿಗೆಸೆದ ಕಲ್ಲು ನಿಮ್ಮನೆ ಮೇಲೇ ಬಿತ್ತು. ಊರವತಿಯಿಂದ ಹನುಮಂತ ದೇವರ ಗುಡಿಗೆ ಹಣ್ಣುಕಾಯಿ ನೈವೇದ್ಯ ಸಹಸ್ರ ನಾಮಾರ್ಚನೆಯಾಯಿತು. ಏನಾದ್ರೂ ಉಪಯೋಗವಾಯಿತೇ? ಆಗಲಿಲ್ಲ. ಈ ಮಂಗಗಳು ಕಲಿಕಾಲದವು. ಮಂತ್ರಕ್ಕೆ ಬಗ್ಗುವಂತಹವಲ್ಲ. ಬೆಳಗಾಗುತ್ತಲೇ ಉದಯರಾಗ ಹಾಡುವ ಮನೆಯ ಹೆಂಗಸರು ''ಹಚಾ, ಹಚಾ, ಕೂ'' ಎನ್ನುವ ''ಮರ್ಕಟೋಚ್ಚಾಟನ'' ಮಂತ್ರ ಹೇಳ್ಲಿಕೆ ಸುರು ಮಾಡಿದ್ರು. ನೀವೆಲ್ಲ ಮಂಗಗಳ ಬೆನ್ನುಹತ್ತಿ 'ಹಾ, ಹೂ, ಹೈ' ಮುಂತಾದ 'ಹ'ಕಾರಗಳಿಂದ ಹೇಶಾರವ ಮಾಡಿ ದಮ್ಮು ಹತ್ತಿ ಬಂದು ಇದೇ ಕಟ್ಟೆಯ ಮೇಲೆ ಕುಂತ್ರಿ. ನೀವು ಮಾಡಿದ್ದಿಷ್ಟೆ, ಆಯ್ತು. ಈ ಸೋಲೊಪ್ಪಿಕೊಳ್ಳಲಿಕಾಗ್ದೆ ಆದದ್ದಾಗಲಿ ಎಂದು ದೇವರ ಮೇಲೆ ಭಾರ ಹಾಕಿ ನಿಮ್ಮ ನಿಮ್ಮ ಮಗಳಂದಿರ ಮನೆಗ್ಹೋದ್ರಿ. ಮುಂದೇನಾಯ್ತು ಗೊತ್ತೆ...? ಕೇಳಿ'' ಎಂದರು ಆಚಾರ್ರು.

''ಹೌದು ಆಚಾರ್ರೆ, ನಾವಂತೂ ಸೋಲೊಪ್ಕೊಳ್ದೆ ಇದ್ರು ನಮ್ದು ಆ ಮಂಗಗಳ ಮುಂದೆ ಸೋಲೇ, ನಾವು ಮಗಳಂದಿರ ಮನೆಗೋದ್ವಿ ಆದ್ರೆ ನೀವ್ಯಾವ ಧೈರ್ಯದ ಮೇಲೆ ಇಲ್ಲುಳಿದ್ರಿ? ಈ ವಾನರಸಂತತಿಯನ್ನು ಹೇಗೆ ಸಾಗ ಹಾಕಿದ್ರಿ? ಕಿಷ್ಕಿಂದೆಯಂತಾಗಿದ್ದ ನಮ್ಮೂರು ಮತ್ತೆ ವೈಜಯಂತಿ ಹೇಗಾಯ್ತು? ಎಂದೆಲ್ಲ ಪುರವಾಸಿ ಪ್ರಶ್ನೆಗಳ ಮಳೆಯನ್ನೇ ಸುರಿಸತೊಡಗಿದಾಗ ಆಚಾರ್ಯರು, ''ಮಹಾಜನಂಗಳೇ, ...'' ಎಂದು ಸ್ವಲ್ಪ ಹೊತ್ತು ಸುಮ್ಮನಿದ್ದು ಮತ್ತೆರಡು ಚಿಟಿಕೆ ನಶ್ಯವನ್ನು ಮೂಗಿಗೇರಿಸಿ, ಛಟಾರೆಂದು ಸೀನಿನ ಸಿಡಿಮದ್ದೊಂದನ್ನು ಹಾರಿಸಿ, ಏನೋ ರಹಸ್ಯವಾದುದನ್ನು ಗಂಭೀರವಾದುದನ್ನು ಹೇಳುವರೋ ಎಂಬಂತೆ ಕಣ್ಣರಳಿಸಿ ಧ್ವನಿ ಸರಿಪಡಿಸಿಕೊಂಡು ತುಸು ಮುಂದಕ್ಕೆ ಬಾಗಿ, ''ನೋಡಿ, ನಿಮ್ಗೆಲ್ಲ ಗೊತ್ತಿದ್ದಂತೆ ನಾನು ಕರ್ಮಠ, ವಿದುರ, ನನಗ್ಯಾತರ ಚಿಂತೆ? ನಿತ್ಯಾಹ್ನಿಕ, ಅನುಷ್ಠಾನ ನಡೆಸಿಕೊಂಡು ಬರ್ತಿದ್ದಂವ. ಹಾಗೆಂದು ಎಲ್ಲದಕ್ಕೂ ದೇವ್ರು, ದೇವ್ರು ಎಂದು ಸುಮ್ನೆ ಕೂತ್ರೆ ಆಗ್ತದೆ ಎಂದು ನಂಬಿದವನಲ್ಲ. ಈ ಮಂಗಗಳಿಗೆ ಗತಿ ಕಾಣಿಸ್ಲೇಬೇಕು ಎಂದು ನಿರ್ಧರಿಸಿದೆ. ಮೊದಮೊದ್ಲು ಚಾಟಿಬಿಲ್ಲು, ಕವಣೆಕಲ್ಲು ಸಣ್ಣ ಮಕ್ಕಳಂತೆ ಪ್ರಯೋಗಿಸಿದೆ. ಗರ್ನಾಲು, ಪಟಾಕಿ ಸಿಡಿಸಿದೆ. ಎರಡೇ ದಿನಕ್ಕೆ ಈ ಮಂಗಗಳೆಲ್ಲ ಇದಕೆಲ್ಲ ಬಗ್ಗುವವಲ್ಲ ಇವುಗಳಿಗೆ ಮನುಷ್ಯರ ನಡುವಳಿಕೆಯ ಪರಿಚಯ ಚೆನ್ನಾಗಿ ಇದೆ ಎಂದು ತಿಳಿದುಹೋಯಿತು. ಸರಿ ಇನ್ನೇನ್ಮಾಡೋದು? ನಾನೂ ನಾಲ್ಕುದಿನ ಮಂಗಗಳೊಡನೆ ಮಂಗನಾಗಿ ತೆಪ್ಪಗೆ ಇದ್ದೆ. ಆ ನಾಕ್ದಿನದಲ್ಲಿ ನನ್ನ ಸಂಸಾರ ಮರ್ಕಟ ಸಂಸಾರವಾಗಿ ನನ್ಮನೆ ಕಿಷ್ಕಿಂದೆ ಅರಮನೆಯಾಗೋಯ್ತು. ದೊಡ್ಡದೊಂದು ಮರದ ಬೋನು ಮಾಡಿ ಹಣ್ಣು ತರಕಾರಿ ಅದರೊಳಗಿರಿಸಿ

ಬಾಯ್ತೆರದು ಅದರೊಳಗಿಟ್ಟೆ. ಈ ಕಪಿಕುಲ ಯಾವ ಮುಲಾಜಿಲ್ಲದೆ ಬೋನ್ನೊಳಗೆ ನುಗ್ಗಿ ಹಣ್ಣು ತರಕಾರಿ ಧ್ವಂಸ ಮಾಡಿದುವು. ಎಷ್ಟೆಂದ್ರೂ ಮಂಗಗಳಿಗೆ ಮನುಷ್ಯರು ಹತ್ತಿರದ ಸಂಬಂಧಿಕರು ಅಲ್ಲವಾ? ಆಸೆಬುರುಕುತನ ಎಲ್ಲಿ ಬಿಟ್ಹೋಗುತ್ತೆ? ಐದನೇ ದಿನ ಬೋನಿನ ಬಾಗಿಲು ತಂತಾನೇ ಹಾಕಿಕೊಳ್ಳುವ ವ್ಯವಸ್ಥೆ ಮಾಡಿ ಏನೂ ತಿಳಿಯದವನಂತೆ ಎಂದಿನಂತೆ ಇದ್ದೆ. ಆವತ್ತಂತೂ ಎಂದಿಗಿಂತ ಹೆಚ್ಚು ಮಂಗಗಳು ಬಂದಿದ್ದವು. ಗಢವ, ಅಜ್ಜ, ಅಜ್ಜಿ, ಅಮ್ಮ, ಅಕ್ಕ, ಅಣ್ಣ, ತಮ್ಮ, ಮರಿ, ಚಳ್ಳೆ ಪಿಳ್ಳೆ ಎಲ್ಲ ಬಂದ್ವಪ್ಪ ಒಂದೇ ಸಲ! ಒಂದೇ ಸಲ ಬೋನಿನೊಳಗೆ ನುಗ್ಗಿದ್ದೇ ತಡ, ಬಾಗಿಲು 'ಧಡ್' ಎಂದು ಹಾಕ್ಕೋಬಿಟ್ತು, ಮುಂದಿಂದೆಲ್ಲಾ ಗೊತ್ತೇ ಇದ್ಯಲ್ಲ ಸಾಕು. ಆ ಮಂಗಗಳಿಗೆ ''ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ, ವ್ಯಾಮೋಹವನ್ನು ತೊರೆದು ಬಾಳಬೇಕು'' ಎಂಬ ಯಕ್ಕುಂಡಿಯವರ ಪದ್ಯ ಯಾರೂ ಹೇಳಿಕೊಟ್ಟಂತಿಲ್ಲ. ಪಾಪ!! ನನಗಂತೂ ಒಮ್ಮೆಲೆ ಏನೋ ಕಳ್ಕೊಂಡಂತಾಗಿ ಇಡೀ ಮನೆ ಭಣಭಣಿಸಲಿಕ್ಕೆ ಹತ್ತು. ಮಂಗಗಳನ್ನ ಸಾಗಹಾಕಿ ಖಾಲಿ ಬೋನು ಮನೆಯೊಳಗಿರಿಸಿದ ಮೇಲೆ ನಾನೂ ತಡೀಲಾರದೆ ಆ ಬೋನಿನೊಳಕ್ಕೆ ಹೋಗಿ ಮೂರ್ದಿನ ಮೂರುರಾತ್ರಿ ಕುಳಿತುಕೊಂಡೇ ಇದ್ದೆ. ಬಂಧುಗಳನ್ನ ಕಳಕೊಂಡ ದುಃಖ ಮರೀಲಿಕ್ಕಾಗತ್ಯೇ ಹೇಳಿ. ನಿಜಬಂಧುಗಳೆಲ್ಲ ಬಂದು ಬಿಟ್ರಲ್ಲಾ ಮತ್ತೆ. ಇನ್ನು ಹೇಗೋ ಆಗ್ತದೆ ''ಕೂಸಿನ ಕಂಡೀರ್ಯಾ... ಮುಖ್ಯಪ್ರಾಣನ ಕಂಡೀರ್ಯಾ ... ಹೇಳಿ ಸ್ವಾಮಿ ... ಹೇಳಿ'' ಎಂದು ಗದ್ಗದ ದನಿಯಿಂದ ಆಚಾರ್ಯರು ತಮ್ಮ ''ಮರ್ಕಟೋಪಾಖ್ಯಾನ'' ಕ್ಕೆ ಮಂಗಳ ಹಾಡಿ ಮತ್ತೊಂದು ಚಿಟಿಕೆ ನಶ್ಯದಾನವನ್ನು ಪಡೆದು, ''ಅಪ್ಪಣೆಯಾಗಬೇಕು'' ಎಂದರು.



ಇದೀಗ ಸಿದ್ಧವಾಗಿವೆ

ಹಿಂದಿನ ಹಾಸ್ಯೋತ್ಸವಗಳಿಂದ ಆಯ್ದ
ರಸ ನಿಮಿಷಗಳ ವಿಸಿಡಿ

ರಾಶಿ - ರತ್ನ ಸಂಸ್ಮರಣೆ - 72 ನಿಮಿಷಗಳು ರೂ. 200/-

ಬೀಚಿ ಸಂಸ್ಮರಣೆ - 72 ನಿಮಿಷಗಳು ರೂ. 200/-


ಕೊರಿಯರ್ ಚಾರ್ಜ್ ಪ್ರತ್ಯೇಕ:

ಬೆಂಗಳೂರಿನಲ್ಲಿ - ರೂ. 20/-

ಇತರ ಪ್ರದೇಶಗಳಿಗೆ - ರೂ. 40/-

ತಮ್ಮ ಚೆಕ್‌ಗಳನ್ನು
''ಕೊರವಂಜಿ - ಅಪರಂಜಿ ಟ್ರಸ್ಟ್'' ಹೆಸರಿಗೆ ನಮೂದಿಸಿ,
ನಮ್ಮ ವಿಳಾಸಕ್ಕೆ ಕಳಿಸಿ ಒಂದು ವಾರದಲ್ಲಿ
ವಿಸಿಡಿ ನಿಮಗೆ ತಲುಪಿಸುತ್ತೇವೆ.

ನಮ್ಮ ವಿಳಾಸ
ಕೊರವಂಜಿ ಅಪರಂಜಿ ಟ್ರಸ್ಟ್
ನಂ. 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ
ಬೆಂಗಳೂರು - 560 003
ದೂರವಾಣಿ: 3345259


AMBUTHIRTHA
POWER PRIVATE LIMITED
2ND FLOOR, 21/19, CRAIG PARK ROAD,
M.G.ROAD CROSS, BANGALORE-560 001,INDIA
TEL:91-80-5597616/5599654/5595315,FZX:91-80-5597617
e-mail: suchind@giasbg01.vsnl.net.in

Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR